
ಲೋಹಿಯಾ ಕೈಪಿಡಿ

ಡಿ. ಎಸ್. ನಾಗಭೂಷಣ



ಲೋಹಿಯಾ ಕೈಪಿಡಿ

ಡಿ.ಎಸ್.ನಾಗಭೂಷಣ

ಪ್ರಕಾಶಕರು

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ

ಶಿವಮೊಗ್ಗ - ೫೭೭ ೨೦೧

Lohia Kaipidi-

Lohia Hand Book introducing Dr. Rammmnohara Lohia, the socialist thinker and activist, written by **D.S.Nagabhushana.** HIG-5, 'Nudi', KHB Colony, Kallahally Extn., Vinobanagar, Shivamogga - 577 204, Tel : 08182-248574, Mobile: 94492 42284

ಮುದ್ರಣ: ೨೦೧೨, ಪುಟಗಳು: ೫೮
ಬೆಲೆ: ರೂ. ೨೫ ಕಾಗದ: ೭೦ ಜಿಎಸ್‌ಎಂ ಮ್ಯಾಪ್‌ಲಿತೋ

ಪ್ರಕಾಶಕರು
ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ - ೫೭೭ ೨೦೧, ದೂರವಾಣಿ: ೯೪೪೯೮೮೬೩೯೦

ಲೇಖಕನ ಮಾತು

ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ೨೦೧೧ರ ಅಕ್ಟೋಬರ್‌ನಲ್ಲಿ ತನ್ನ ಉದ್ಘಾಟನೆಯ ಸಂದರ್ಭದಲ್ಲಿ ಪ್ರಕಟಿಸಿದ್ದ ಲೋಹಿಯಾ ಕೈಪಿಡಿ, ಜೆಪಿ ಕೈಪಿಡಿ ಮತ್ತು ಲೋಹಿಯಾ ವಾಣಿ ಎಂಬ ಈ ತ್ರಿವಳಿ ಕಿರುಪುಸ್ತಕಗಳು ಈಗ ಹೊಸ ಆಕಾರ ಮತ್ತು ರೂಪಗಳಲ್ಲಿ ಪರಿಷ್ಕೃತಗೊಂದು ಪ್ರಕಟವಾಗುತ್ತಿವೆ.

ಮೊದಲೆರಡು ಪುಸ್ತಕಗಳು ಭಾರತೀಯ ಸಮಾಜವಾದಿ ಚಳುವಳಿಯ ಎರಡು ಕಣ್ಣುಗಳಂತಿರುವ ಡಾ॥ ರಾಮಮನೋಹರ ಲೋಹಿಯಾ ಹಾಗೂ ಜಯಪ್ರಕಾಶ್ ನಾರಾಯಣರ ಬದುಕು ಮತ್ತು ವಿಚಾರಗಳನ್ನು ಸಂಕ್ಷಿಪ್ತವಾಗಿ ಮತ್ತು ಸಾರವತ್ತಾಗಿ ಪರಿಚಯ ಮಾಡಿಕೊಡುವ ಪ್ರಯತ್ನಗಳು. ಬದುಕು ಎಲ್ಲ ಕ್ಷೇತ್ರಗಳಲ್ಲಿ ವಾಣಿಜ್ಯಮಯವಾಗಿ, ಎಲ್ಲವನ್ನೂ ಹಣಕಾಸು ಪರಿಭಾಷೆಯಲ್ಲೇ ಸರಕಾಗಿ ಗ್ರಹಿಸಿ ಬೆಲೆ ಕಟ್ಟುತ್ತಿರುವ ಈ ದಿನಗಳಲ್ಲಿ, ಮನುಷ್ಯ ಸಂವೇದನೆಯೆಂಬುದೇ ನಿಜವಾಗಿ ಮಾಯವಾಗುತ್ತಿದೆಯೇನೋ ಎನಿಸತೊಡಗಿದೆ. ಇದರ ಫಲವಾಗಿ ಕ್ರೋಧ, ಮತ್ಸರ, ಹಿಂಸೆಗಳಿಂದ ತುಂಬಿದ ಸ್ಪರ್ಧೆ ಮತ್ತು ನವ ಶ್ರೀಮಂತಿಕೆಯ ಸಾಮಾಜಿಕ ಅಶ್ಲೀಲತೆಗಳು ಗಾಬರಿಗೊಳಿಸುವಷ್ಟರ ಮಟ್ಟಿಗೆ ಬೆಳೆಯುತ್ತಿವೆ. ನಾವು ಕಳೆದ ಅರವತ್ತು ವರ್ಷಗಳಲ್ಲಿ ಏನು ಕಟ್ಟ ಹೊರಟು ಎಲ್ಲಿಗೆ ತಲುಪಿದ್ದೇವೆ ಎಂಬ ಪ್ರಶ್ನೆ ನಮ್ಮನ್ನು ಸದಾ ಕಾಡತೊಡಗಿದೆ. ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಬದುಕನ್ನೇ ಮುಡಿಪಾಗಿರಿಸಿ, ನಾಡನ್ನು ಕಟ್ಟ ಹೊರಟ–ತಮ್ಮ

ವಿಶಿಷ್ಟ ವಿಚಾರ ಮತ್ತು ತ್ಯಾಗ ಹಾಗೂ ಸಾಹಸಗಳ ಮೂಲಕ ತಮ್ಮ ಕಾಲದ ಯುವಜನರ ಕಣ್ಮಣಿಗಳಾಗಿದ್ದ-ಇಬ್ಬರು ಧೀಮಂತ ನಾಯಕರನ್ನು ಇಂದಿನ ಯುವಜನರಿಗೆ ಪರಿಚಯ ಮಾಡಿಕೊಡುವುದು ಉಚಿತವೆಂದು ನಾನು ಭಾವಿಸಿದ್ದೇನೆ.

ಇನ್ನು ಮೂರನೆಯ ಪುಸ್ತಕ ಲೋಹಿಯಾವಾಣಿ ಲೋಹಿಯಾ ಅವರ ಸಾಹಿತ್ಯ ಮತ್ತು ಭಾಷಣಗಳಿಂದ ಆಯ್ದ ಉಲ್ಲೇಖಗಳ ಕಿರು ಸಂಗ್ರಹ. ಲೋಹಿಯಾ ಅಪೂರ್ವ ಮುನ್ನೋಟದ ಚಿಂತಕರೂ ಮತ್ತು ರಾಜಕಾರಣಿಯೂ ಆಗಿದ್ದುದರಿಂದ ಈ ಉಲ್ಲೇಖಗಳು ಹಳೆಯವೆನ್ನಿಸದೆ, ರಾಜಕೀಯ ಮತ್ತು ಸಾಮಾಜಿಕ ಪುನಾರಚನೆಯ ಕೆಲಸದಲ್ಲಿ ತೊಡಗಿರುವವರಿಗೆ ಇಂದೂ ಎಚ್ಚರಿಕೆಯ ಘಂಟೆಗಳಂತೆ, ಬೆಳಕಿನ ದಾರಿಗಳಂತೆ, ಹೊಸ ಅರಿವು ಮತ್ತು ಸ್ಫೂರ್ತಿ ತುಂಬಿ ಮುನ್ನಡೆಸಬಲ್ಲವಾಗಿವೆ. ಇದು ಈ ಹಿಂದೆ ಪ್ರಕಟವಾಗಿದ್ದ ಲೋಹಿಯಾ ಕೆಂಪು ಪುಸ್ತಕದ ಸಂಕ್ಷಿಪ್ತ ರೂಪವಲ್ಲ. ಲೋಹಿಯಾ ಸಾಹಿತ್ಯ ಎನ್ನಿಸುವ ಸರಿ ಸುಮಾರು ಎಲ್ಲ ಸಾಹಿತ್ಯವನ್ನೂ ಮತ್ತೊಮ್ಮೆ ತಡಕಿ, ಇಂದಿನ ಸಂದರ್ಭಕ್ಕೂ ಪ್ರಸ್ತುತವಾಗಬಲ್ಲ ಉಲ್ಲೇಖಗಳನ್ನು ಹೊಸದಾಗಿಸಂಪಾದಿಸಿ, ಅನುವಾದಿಸಿ, ಹೊಸ ವಿನ್ಯಾಸದಲ್ಲಿ ಜೋಡಿಸಿರುವ ಪುಸ್ತಕವಿದು. ಆದರೆ ಇದು ಲೋಹಿಯಾರ ತಾತ್ವಿಕತೆಯನ್ನು ಅರಿಯಲು Short cut ಅಲ್ಲ. ಈ ಕಿರು ಪುಸ್ತಕ ಲೋಹಿಯಾರ ಸಮಗ್ರ ವಿಚಾರಧಾರೆಯನ್ನು ಪರಿಚಯಮಾಡಿಕೊಳ್ಳಲು ಪ್ರೇರೇಪಿಸುವ ಪ್ರಯತ್ನವಷ್ಟೆ. ಇಲ್ಲಿನ ಕೆಲವು ಉಲ್ಲೇಖಗಳನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ರಾಜಕೀಯ ತತ್ವಶಾಸ್ತ್ರದ ಪರಿಚಯದ ಅಗತ್ಯವಿದೆ. ಆದರೆ ಅಂತಹವನ್ನು ಸುಮ್ಮನೆ

ಓದಿಕೊಂಡು ಮುಂದುವರೆದರೆ, ಪುಸ್ತಕ ಮುಗಿಸುವ ಹೊತ್ತಿಗೆ ಅವು ಸ್ವಲ್ಪವಾದರೂ ಅರ್ಥವಾಗುವ ಸಂಭವವುಂಟು.

ಈ ಮೂರೂ ಪುಸ್ತಕಗಳ ಓದಿನಿಂದ ಯುವಜನರಲ್ಲಿ ಸಮಾಜವಾದವನ್ನು ಕುರಿತು ಉದ್ದೇಶಪೂರ್ವಕವಾಗಿ ಹುಟ್ಟಿಸಲಾಗಿರುವ ಅನುಮಾನ-ಗೊಂದಲಗಳು ಸ್ವಲ್ಪಮಟ್ಟಿಗಾದರೂ ಪರಿಹಾರವಾಗಿ ಈ ಪರಿಕಲ್ಪನೆ ಮತ್ತು ಸಿದ್ಧಾಂತದ ಬಗ್ಗೆ ಹೊಸ ಕುತೂಹಲ ಉಂಟಾಗಬಹುದೆಂದು ನಾನು ಆಶಿಸಿದ್ದೇನೆ.

ಈ ಪುಸ್ತಕ ತ್ರಿವಳಿ ಪ್ರಕಟವಾದ ಒಂದು ವರ್ಷದಲ್ಲೇ ಖಾಲಿಯಾದರೂ, ಅವುಗಳಿಗೆ ಪುನರ್‌ಮುದ್ರಣದ ಸೌಭಾಗ್ಯ ಒದಗಿಬಂದಿರಲಿಲ್ಲ. ಗೀತಾಂಜಲಿ ಪುಸ್ತಕ ಪ್ರಕಾಶನದ ಗೆಳೆಯ ಜಿ.ಬಿ.ಟಿ. ಮೋಹನ್ ಅವುಗಳಿಗೆ ಈ ಭಾಗ್ಯ ಒದಗಿಸಿ ಕೊಟ್ಟಿದ್ದಾರೆ. ಅದೂ ಆಕರ್ಷಕ ಆಕಾರ ಮತ್ತು ರೂಪುಗಳಲ್ಲಿ. ಅವರಿಗೆ ಮತ್ತು ಈ ಪುಸ್ತಕಗಳ ಮೊದಲ ಮುದ್ರಣದ ಪ್ರಕಾಶಕರಾದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಟ್ರಸ್ಟಿಗಳೆಲ್ಲರಿಗೂ ಇಲ್ಲಿ ಕೃತಜ್ಞತೆಗಳನ್ನು ಹೇಳಬೇಕು.

೧೫.೩.೨೦೧೨
ಶಿವಮೊಗ್ಗ

ಡಿ.ಎಸ್.ನಾಗಭೂಷಣ

ಲೋಹಿಯಾ ಕೈಪಿಡಿ

"ಜನ ನನ್ನ ಮಾತುಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ... ಬಹುಶಃ ನಾನು ಕಾಲದ ಜೊತೆ ಹೆಜ್ಜೆ ಹಾಕುವಾಗ ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದೇನೆ... ಆದರೆ ಒಂದಲ್ಲ ಒಂದು ದಿನ ಅವರು ನನ್ನ ಮಾತುಗಳನ್ನು ಅರ್ಥ ಮಾಡಿಕೊಳ್ಳಲೇಬೇಕು. ನಾನು ಸತ್ತ ಮೇಲಾದರೂ..."

ಇವು ತಾವು ಕೊನೆಯುಸಿರು ಎಳೆಯುವ ಕೆಲವು ದಿನಗಳ ಹಿಂದೆ ಲೋಹಿಯಾ ಆಡಿದ ಮಾತುಗಳು. ಲೋಹಿಯಾ ಎಂದರೆ ಡಾ॥ರಾಮಮನೋಹರ ಲೋಹಿಯಾ. ಭಾರತೀಯ ಸಮಾಜವಾದಿ ಚಳುವಳಿಯ ಅಗ್ರ ನಾಯಕರಲ್ಲೊಬ್ಬರು. ಅವರಿಗೆ ತಮ್ಮ ಮಾತುಗಳನ್ನು ಜನ ಅರ್ಥ ಮಾಡಿಕೊಳ್ಳುತ್ತಿಲ್ಲ ಎಂಬ ವಿಷಾದವಿತ್ತು. ಅದಕ್ಕೆ ಕಾರಣವೂ ಅವರಿಗೆ ಗೊತ್ತಿತ್ತು. ಅವರು ನಾಳೆಯ ಮಾತುಗಳನ್ನು ಇಂದೇ ಆಡುತ್ತಿದ್ದರು. ಹಾಗಾಗಿ ಜನ ಒಂದಲ್ಲ ಒಂದು ದಿನ ತಮ್ಮ ಮಾತುಗಳನ್ನು ಕೇಳಿಯೇ ಕೇಳುತ್ತಾರೆ, ಕೇಳಬೇಕಾಗುತ್ತದೆ ಎಂಬ ನಂಬಿಕೆ ಇತ್ತು. ಏಕೆಂದರೆ ಅವರು ಕಾಲಜ್ಞಾನಿಯಲ್ಲದಿದ್ದರೂ ಇತಿಹಾಸ ಜ್ಞಾನಿಯಾಗಿದ್ದರು. ಬಹುಶಃ ೨೦ನೇ ಶತಮಾನದಲ್ಲಿ ಭಾರತ ಕಂಡ ಅತ್ಯಂತ ಪ್ರಖರ ಚಿಂತಕರಲ್ಲಿ ಅವರೂ ಒಬ್ಬರಾಗಿದ್ದರು. ಅವರ ಗೆಳೆಯ ಭೋಲಾ

ಚಟರ್ಜಿ ಹೇಳಿದಂತೆ, "ಸೂಯಜ್‌ನಿಂದ ಪೂರ್ವಕ್ಕೆ ಬಾಳಿದ–ಅರಿಸ್ಟಾಟಲ್‌ನ ಕಾವ್ಯ ಮೀಮಾಂಸೆಯಾಗಿರಲಿ, ಮಾರ್ಕ್ಸ್‌ನ ಬಂಡವಾಳಶಾಹಿ ವಿಶ್ಲೇಷಣೆಯೇ ಆಗಿರಲಿ, ಭವಿಷ್ಯವಾದವೇ ಆಗಿರಲಿ, ಇಲ್ಲವೇ ಗಾಂಧೀಜಿಯ ಅಹಿಂಸೆ ಮತ್ತು ಸತ್ಯಾಗ್ರಹ ಪರಿಕಲ್ಪನೆಗಳೇ ಆಗಿರಲಿ ಅಥವಾ ಉಪನಿಷತ್ತುಗಳ ಸಾರವೇ ಆಗಿರಲಿ, ಇವೆಲ್ಲವುಗಳ ಬಗ್ಗೆ ಕೇಳುವವರನ್ನು ಮೂಕವಿಸ್ಮಿತರನ್ನಾಗಿ ಮಾಡುವಷ್ಟು ಆಳವಾದ ಚರ್ಚೆ ನಡೆಸಬಲ್ಲಂತಹ ಜ್ಞಾನಕೋಶ ಸಮಾನವಾದದ್ದೆಂದು ಹೇಳಬಹುದಾದ ಬಹು ಆಯಾಮಗಳ ವ್ಯಕ್ತಿತ್ವದ–ಕೊನೆಯ ಮೇಧಾವಿ ಅವರಾಗಿದ್ದರು"

ಅಯೋಧ್ಯಾ ನಾಡಿನ ಲೋಹಿಯಾ

ಲೋಹಿಯಾ ನಿಧನರಾಗಿ ೪೩ ವರ್ಷಗಳಾಗಿವೆ. ಈ ವರ್ಷ ಅವರ ಜನ್ಮಶತಮಾನೋತ್ಸವವನ್ನು ಆಚರಿಸಲಾಗುತ್ತಿದೆ. ಆದರೂ, ಅವರೆಂದೂ ಯಾವ ಅಧಿಕಾರ ಸ್ಥಾನಕ್ಕೇರದಿದ್ದರೂ, ಸಾರ್ವಜನಿಕ ಜೀವನದಲ್ಲಿ ಪ್ರತಿಷ್ಠಿತರಿಂದಾಗಲೀ, ಮಾಧ್ಯಮಗಳಿಂದಾಗಲೀ 'ಮಾನ್ಯತೆ' ಪಡೆಯದಿದ್ದರೂ, ಲೋಹಿಯಾ ಭಾರತದಾದ್ಯಂತ ಈಗಲೂ ಕೆಲವರ ಮನದಲ್ಲಾದರೂ ಅಪರೂಪದ ನಾಯಕರಾಗಿ ಅಚ್ಚಳಿಯದೆ ಉಳಿದಿದ್ದಾರೆ. ಕರ್ನಾಟಕದ ಮಟ್ಟಿಗಂತೂ ರಾಜ್ಯದ ರಾಜಕಾರಣ, ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಬಹುಶಃ ಇವರಷ್ಟು ಪ್ರಭಾವ ಬೀರಿದ ಆಧುನಿಕ ಕಾಲದ ಇನ್ನೊಬ್ಬ ನಾಯಕರಿರಲಾರರು. ಲೋಹಿಯಾ ಹಾಗೂ ಕರ್ನಾಟಕಕ್ಕೂ ಯಾವ ಸಂಬಂಧ? ಎತ್ತಣ ಮಾಮರ ಎತ್ತಣ ಕೋಗಿಲೆ? ಅವರು ಮೂಲತಃ ಉತ್ತರಪ್ರದೇಶದವರು, ಅಯೋಧ್ಯಾ ನಾಡಿನವರು. ೧೯೫೧ರಲ್ಲಷ್ಟೇ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನ ಕಾಗೋಡಿನಲ್ಲಿ ನಡೆದ ಭೂಸತ್ಯಾಗ್ರಹಕ್ಕೆ ಸ್ಫೂರ್ತಿ, ಮಾರ್ಗದರ್ಶನ ನೀಡಲು ಬಂದು ಕರ್ನಾಟಕಕ್ಕೆ

ಪರಿಚಿತರಾದವರು. ಆದರೆ ಅವರು ಶಾಂತವೇರಿ ಗೋಪಾಲಗೌಡ ರಂತಹ ಅನನ್ಯ ಜನನಾಯಕರನ್ನು ಹುಟ್ಟು ಹಾಕಿದ್ದರು.

ಲೋಹಿಯಾ ಮೂಲತಃ ರಾಜಕೀಯ ವ್ಯಕ್ತಿ-ರಾಜಕಾರಣಿ. ಅವರ ಪಕ್ಷವಾದ ಸಮಾಜವಾದಿ ಪಕ್ಷ ತನ್ನ ಅತ್ಯುತ್ತಮ ದಿನಗಳಲ್ಲೂ ಕರ್ನಾಟಕ ಶಾಸನಸಭೆಯಲ್ಲಿ ಬೆರಳೆಣಿಕೆ ಗಿಂತ ಹೆಚ್ಚು ಶಾಸಕರನ್ನು ಹೊಂದಿರಲಿಲ್ಲ. ಆದರೂ ಶಾಸನ ಸಭೆಯ ತುಂಬಾ ಅವರದ್ದೇ ಕಾರುಬಾರು. ಅವರದೇ ಆಕರ್ಷಣೆ. ಇದಕ್ಕೆಲ್ಲ ಲೋಹಿಯಾರೇ ಸ್ಫೂರ್ತಿ. ಅಷ್ಟೇ ಅಲ್ಲ, ಲೋಹಿಯಾ ನಿಧನಾನಂತರ ಗೋಪಾಲಗೌಡರು ಹಾಗೂ ಇತರೆ ಕೆಲವೇ ಕೆಲವರನ್ನು ಹೊರತುಪಡಿಸಿದರೆ, ಅವರ ಶಿಷ್ಯರೆಲ್ಲ ಅವರ ಹಾದಿ ಬಿಟ್ಟು ಎಲ್ಲೆಲ್ಲಿಗೋ ಹೋಗಿ, ಏನೇನೋ ಆದರು. ಜನರ ಶಾಪಕ್ಕೆ ಗುರಿಯಾದರು. ಆದರೂ ಜನಮನದಲ್ಲಿ ಲೋಹಿಯಾ ಪ್ರತಿಬಿಂಬ ಕಿಂಚಿತ್ತೂ ಕಳಂಕಿತವಾಗಲಿಲ್ಲ. ಭ್ರಷ್ಟಗೊಂಡ ಅವರ ಶಿಷ್ಯರನ್ನು ಕಂಡು ಜನ ಮರುಗುವುದು ಹೀಗೆ: 'ಲೋಹಿಯಾ ಶಿಷ್ಯ ರಾಗಿಯೂ ಹೀಗೆ ಹಾಳಾಗಿ ಹೋದರಲ್ಲಾ!'. ಅದಕ್ಕೆ ಕಾರಣ ಲೋಹಿಯಾ ವ್ಯಕ್ತಿತ್ವ ಮತ್ತು ವಿಚಾರಗಳು ಅವರ ರಾಜಕೀಯ ಶಿಷ್ಯಗಣವನ್ನು ಮೀರಿ ಒಂದು 'ಸಂಸ್ಕೃತಿ'ಯಾಗಿ ಜನರ ಗಮನ ಸೆಳೆದಿದ್ದುದು. ಕುವೆಂಪುರಿಂದ ಹಿಡಿದು ಕುಂ.ವೀರಭದ್ರಪ್ಪನ ವರವರೆಗೆ ಅವರು ಕನ್ನಡ-ಸಾಹಿತ್ಯ-ಸಂಸ್ಕೃತಿ ಲೋಕವನ್ನು ಪ್ರಭಾವಿಸಿದ್ದರು. ಅದು ಕನ್ನಡ ಸಾಹಿತ್ಯ-ಸಂಸ್ಕೃತಿ ಲೋಕದ ಪ್ರಮುಖರೆನಿಸಿದ ಪು.ತಿ.ನ, ಜಿ.ಎಸ್.ಎಸ್., ಕಾಳಿಂಗರಾವ್, ತೇಜಸ್ವಿ, ಅನಂತಮೂರ್ತಿ, ಕೆ.ವಿ.ಸುಬ್ಬಣ್ಣ, ಲಂಕೇಶ್, ಚಂಪಾ, ದೇವನೂರ ಮಹಾದೇವರನ್ನಷ್ಟೇ ಅಲ್ಲ ರಾಜಕೀಯ-ಸಾಮಾಜಿಕ ಚಿಂತಕ-ಚಳುವಳಿಗಾರರೆನಿಸಿದ ಎಚ್.ಗಣಪತಿಯಪ್ಪ, ಪ್ರೊ॥ ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ.ಸುಂದರೇಶ್, ಪ್ರೊ॥

ರವಿವರ್ಮ ಕುಮಾರ್, ಎಸ್.ಎಸ್. ಕುಮುಟಾ. ನೀಲಗಂಗಯ್ಯ ಪೂಜಾರ್‌ವರೆಗೆ ಜಾತಿ-ವರ್ಗಗಳ ಭೇಧವಿಲ್ಲದೆ ವಿಸ್ತರಿಸಿತ್ತು. ಅದಕ್ಕೆ ಕಾರಣಗಳು ಮುಖ್ಯವಾಗಿ ಎರಡು. ಒಂದು: ಜಗತ್ತಿನ ಮತ್ತು ಭಾರತದ ಚರಿತ್ರೆ ಕುರಿತ ಅವರ ವಿಶಿಷ್ಟ ಗ್ರಹಿಕೆ. ಎರಡು: ಜಗತ್ತಿನ ಮತ್ತು ಭಾರತದ ವರ್ತಮಾನ ಹಾಗೂ ಭವಿಷ್ಯ ಕುರಿತ ಅವರ ವಿಶಿಷ್ಟ ಮಂಡನೆಗಳು. ಇವೆಲ್ಲ ಸೇರಿಯೇ ಲೋಹಿಯಾ ಸಮಾಜವಾದ ಎಂದು ಹೆಸರಾಗಿರುವುದು.

ಸಮಾಜವಾದ ಮತ್ತು ಕಾಂಗ್ರೆಸ್ ಟೋಪಿ!

ಸಮಾಜವಾದದ ಬಗ್ಗೆ ಎಡೆಬಿಡದೆ ಭಾಷಣ ಮಾಡುವವರನ್ನು, ಆಳವಾದ ಜಿಜ್ಞಾಸೆ ನಡೆಸುವವರನ್ನು ಮತ್ತು ಸಮಾಜವಾದಿ ಹೋರಾಟಗಳಿಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರನ್ನು ಸಮಾಜವಾದವೆಂದರೇನು ಎಂದು ಕೇಳಿದರೆ ಒಂದು ಕ್ಷಣ ತಡಬಡಾಯಿಸುವರು. ಇದಕ್ಕೆ ಕಾರಣ, ಸಮಾಜವಾದದ ಕಲ್ಪನೆ ಹುಟ್ಟಿ ಚಲಾವಣೆಗೆ ಬಂದ ಕಳೆದ ಒಂದು-ಒಂದೂವರೆ ಶತಮಾನದಲ್ಲಿ ಅದು ಹಲವು ನಿರೂಪಣೆಗಳಿಗೆ, ಅನುಷ್ಠಾನ ರೀತಿ-ನೀತಿಗಳಿಗೆ ಸಿಕ್ಕಿ ಎಷ್ಟು ಅರ್ಥ ಸ್ಥೂಲತೆಗೆ ಈಡಾಗಿದೆ ಎಂದರೆ, ಅದನ್ನು ಜನಪ್ರಿಯ ಭಾಷೆಯಲ್ಲಿ ಕಾಂಗ್ರೆಸ್ ಟೋಪಿಗೆ ಹೋಲಿಸುವುದುಂಟು. ಅದು ಹಾಕಿಕೊಂಡವರೆಲ್ಲರ ತಲೆಗೆ ಹೊಂದುವಂತೆ, ಸಮಾಜವಾದ ಕೂಡ ವ್ಯಾಖ್ಯಾನಕಾರರ, ಹೋರಾಟಗಾರರ ಕಲ್ಪನೆಗೆ ತಕ್ಕಂತೆ ನಿರೂಪಿತವಾಗುತ್ತಾ ಹೋಗಿದೆ! ಇದು ಸಮಾಜವಾದದ ಶಕ್ತಿಯೂ ಹೌದು, ದೌರ್ಬಲ್ಯವೂ ಹೌದು. ಶಕ್ತಿ ಏಕೆಂದರೆ ಅದು ಹಲವು ರೀತಿಯ ಜನರ ಕುತೂಹಲ-ಆಸೆ-ಆಕರ್ಷಣೆಗಳ ವಸ್ತುವಾಗಿದೆ. ದೌರ್ಬಲ್ಯ ಏಕೆಂದರೆ, ಈ ಹಲವು ರೀತಿಯ ಕಲ್ಪನೆಗಳ ಗೊಂದಲದಲ್ಲಿ ಅದು, ಹಲವು ಬಾರಿ ಕಳೆದು ಹೋಗುವ ಅಪಾಯವನ್ನು ಎದುರಿಸಿದೆ.

ಆದರೆ ಲೋಹಿಯಾ ತಮ್ಮ ಖಚಿತ ವಿಚಾರ ಮತ್ತು ಕಾರ್ಯಕ್ರಮಗಳ ಮೂಲಕ ಅದಕ್ಕೊಂದು ಸ್ಪಷ್ಟ ರೂಪ ಕೊಡಲು ಶ್ರಮಿಸಿದರು. ಮೂರ್ತ ಕಾರ್ಯಕ್ರಮಗಳಾಗಿ ಕಾಣಿಸಿಕೊಳ್ಳ ಲಾಗದ ಅಮೂರ್ತ ವಿಚಾರಗಳನ್ನು ಅವರು ತಿರಸ್ಕರಿಸ ಬೇಕೆನ್ನುತ್ತಿದ್ದರು. ಹಾಗಾಗಿಯೇ ಲೋಹಿಯಾ ಒಣ ಸಿದ್ಧಾಂತಿ ಯೆನಿಸಿಕೊಳ್ಳದೆ ತೀವ್ರ ಕಾರ್ಯಕ್ರಮವಾದಿ ಎನಿಸಿದ್ದರು. ಅವರು ಪ್ರಖರ ಬೌದ್ಧಿಕರಾಗಿದ್ದಂತೆಯೇ ದಣಿವರಿಯದ ಹೋರಾಟ ಗಾರರೂ ಆಗಿದ್ದರು. ಆದರೆ ಈ ಹೋರಾಟದಲ್ಲಿ ಮನುಷ್ಯನ ಬೌದ್ಧಿಕ ಸೂಕ್ಷ್ಮತೆ ಹಾಗೂ ಆನಂದದ ಸ್ರೋತಗಳು ಘಾಸಿಯಾಗ ದಂತೆ, ಬತ್ತಿಹೋಗದಂತೆ ಖಚಿತಪಡಿಸಿಕೊಳ್ಳುವ ರೀತಿಯಲ್ಲಿ ಅವರು ಓರ್ವ ಪೂರ್ಣ ಮಾನವತಾವಾದಿಯಾಗಿ ಸಮಾಜವಾದಿ ಚಿಂತನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದರು. ಹಾಗಾಗಿಯೇ ಕರ್ನಾಟಕದ ಮಾತ್ರವಲ್ಲ, 'ಅಗ್ಗೇಯ'ರಿಂದ ಹಿಡಿದು ಎಂ.ಎಫ್. ಹುಸೇನ್‌ರವರೆಗೆ ಅವರ ಕಾಲದ ಭಾರತದ ಸರಿಸುಮಾರು ಎಲ್ಲ ಲೇಖಕರೂ, ಕಲಾವಿದರೂ ಅವರ ಒಡನಾಡಿ ಗಳಾಗಿದ್ದರು. ಕನ್ನಡ ಸಂದರ್ಭಕ್ಕೆ ಉದಾಹರಣೆ ಕೊಡುವು ದಾದರೆ, ಕುವೆಂಪುರಂತಹ ಅಸಾಂಪ್ರದಾಯಿಕ ವೈಚಾರಿಕ ಲೇಖಕರಿರಲಿ, ಪುತಿನರಂತಹ ಸಾಂಪ್ರದಾಯಿಕ ಭಕ್ತಿ ಕವಿಯೂ; ಲೋಹಿಯಾ ಎಂದೊಡನೆ, 'ನಾನೂ ಅವನ ಭಕ್ತನಪ್ಪ' ಎನ್ನುತ್ತಿರೆಂದರೆ?

ಸತ್ಯ+ಸಮತೆ+ಸೌಂದರ್ಯ= ಲೋಹಿಯಾ!

ಇದಕ್ಕೆ ಕಾರಣ, ತಮ್ಮನ್ನು ನಿರೀಶ್ವರವಾದಿ ಎಂದು ಕರೆದು ಕೊಳ್ಳುತ್ತಿದ್ದ ಲೋಹಿಯಾ ನಮ್ಮ ಪ್ರಚಾರಪ್ರಿಯ ವಿಚಾರವಾದಿ ಗಳಂತೆ ಜನರ ಪಾರಂಪರಿಕ ನಂಬಿಕೆಗಳನ್ನು ಮೌಢ್ಯಗಳೆಂದು

ಸಾರಾಸಗಟಾಗಿ ತಿರಸ್ಕರಿಸದೆ, ಓರ್ವ ಸಾಮಾಜಿಕ-ಸಾಂಸ್ಕೃತಿಕ ವೈದ್ಯನಂತೆ ಅವುಗಳ 'ಚರಿತ್ರೆ'ಯನ್ನು ವಿಶ್ಲೇಷಿಸಿ ನೋಡಿದರು. ಅವುಗಳಲ್ಲಿ ಸೇರಿಕೊಂಡಿದ್ದ ಜಡತೆಯನ್ನು ಎತ್ತಿ ತೋರಿಸಿದರು. ಹಾಗೇ ಅವುಗಳ ಆಳದಲ್ಲಿದ್ದ ಚಲನಶೀಲ ಅಂಶಗಳನ್ನು ವರ್ತಮಾನಕ್ಕೆ ವಿಸ್ತರಿಸಿ, ಅವುಗಳಲ್ಲಿ ಅಡಗಿಕೊಂಡಿದ್ದ ಸಾಂಸ್ಕೃತಿಕ ಸೌಂದರ್ಯವನ್ನು ಬಿಡಿಸಿಟ್ಟರು. ರಾಮ, ಕೃಷ್ಣ, ಶಿವರನ್ನು ಚಾರಿತ್ರಿಕ ವ್ಯಕ್ತಿಗಳಂತೆ ನೋಡದೆ, ಐತಿಹ್ಯಗಳಂತೆ ಗಣಿಸಿ ಅವರನ್ನು ಕುರಿತ ಕಥೆ-ಉಪಕಥೆ-ನಂಬಿಕೆ-ಆಚರಣೆಗಳನ್ನು ಲೋಹಿಯಾ ತಮ್ಮ ಎರಡು ಲೇಖನಗಳಲ್ಲಿ ವಿಶ್ಲೇಷಿಸುತ್ತಾ, ಈ ವಿಶ್ಲೇಷಣೆಯನ್ನು ಸಮಕಾಲೀನ ಚರಿತ್ರೆಯ ಗಾಂಧೀಜಿಗೆ ತಂದು ಕೂಡಿಸುವ ಪರಿ ಇದಕ್ಕೆ ಅತ್ಯುತ್ತಮ ಉದಾಹರಣೆ. ಹಾಗೇ ಚಿತ್ರಕೂಟದಲ್ಲಿ ಅವರ ಸ್ಫೂರ್ತಿ ಮತ್ತು ಮಾರ್ಗದರ್ಶನದಲ್ಲಿ ಆರಂಭವಾದ 'ರಾಮಾಯಣ ಮೇಳ' ಇನ್ನೊಂದು ಉದಾಹರಣೆ. ಈ ಮೂಲಕ ಅವರು ನಿರೀಶ್ವರವಾದದ ಸಾಂಪ್ರದಾಯಿಕ ಅರ್ಥವನ್ನೇ ಒಡೆಯುವವರು ಎಂಬುದನ್ನು ಗಮನಿಸದೆ ಹೋದರೆ, 'ವಿಗ್ರಹ ಭಂಜಕ'ರೆಂದೇ ಹೆಸರಾದ ಲೋಹಿಯಾರ ನೋಟಕ್ರಮ ಹಾಗೂ ಕಾರ್ಯಕ್ರಮಗಳ ನಾವೀನ್ಯತೆಗಳನ್ನು ನಾವು ಅರ್ಥಮಾಡಿಕೊಳ್ಳಲಾರೆವು. ಲೋಹಿಯಾರ ಸಮಾಜವಾದವನ್ನು ಅವರ ಕೆಲವು ಅನುಯಾಯಿಗಳು ಸತ್ಯ+ಸಮತೆ+ಸೌಂದರ್ಯ ಎಂದು ಸೂತ್ರೀಕರಿಸಿ ನಿರೂಪಿಸಿರುವರು. ಈ ನಿರೂಪಣೆ ವೈಚಾರಿಕ ನೆಲೆಯಲ್ಲಿ ಸರಿಯಾದುದೇ ಆದರೂ, ಅಮೂರ್ತವಾಗಿದೆ. ಇವನ್ನು ಸಾಕಾರವಾಗಿ-ಅಂದರೆ ವ್ಯಾವಹಾರಿಕ ಜೀವನದಲ್ಲಿ- ಹಿಡಿದಿಡುವ ಮತ್ತು ಪರಸ್ಪರ ಜೋಡಿಸಿ ಸಮಾಜವಾದವೆಂಬ ಏಕತತ್ವವಾಗಿ ಕಾಣಿಸಬಲ್ಲ ಕಾರ್ಯಕ್ರಮ ವಿನ್ಯಾಸವೇ ನಿಜವಾದ ಲೋಹಿಯಾ ಸಮಾಜವಾದ.

ಸಮಾಜವಾದ ಎಂದರೆ ಏನು?

ಸಮಾಜವಾದ ಎಂಬ ಶಬ್ದವೇ ಸೂಚಿಸುವಂತೆ, ಅದು ಸಮಾಜವನ್ನು ಮೂಲಘಟಕವನ್ನಾಗಿ ನೋಡಿ ಅದರ ಹಿತಾಸಕ್ತಿಗಳನ್ನು-ಅಂದರೆ ಮನುಷ್ಯನ ಸಾಂಘಿಕ ಜೀವನ ಮಾದರಿಯನ್ನು-ಎತ್ತಿ ಹಿಡಿಯುವ ಸಿದ್ಧಾಂತ. ಈ ಮಾದರಿಯ ಹಿಂದೆ ಇರುವುದು ಮನುಷ್ಯ ಮನುಷ್ಯರ ನಡುವಣ ಸಮಾನತೆಯ ನಂಬಿಕೆ ಮತ್ತು ಆದರ್ಶದ ಸ್ಫೂರ್ತಿ. ಈ ಸಮಾನತೆಯ ಅರ್ಥವನ್ನು ಅನ್ವೇಷಿಸುವ ಮತ್ತು ಅದಕ್ಕನುಸಾರವಾದ ಕಾರ್ಯಕ್ರಮಗಳನ್ನು ರೂಪಿಸುವ ಪ್ರಯತ್ನವೇ ಜಗತ್ತಿನಾದ್ಯಂತ ಸಮಾಜವಾದಿ ಚಳುವಳಿ ಎನ್ನಿಸಿಕೊಂಡಿದೆ. ಆದರೆ ಈ ಚಳುವಳಿಯ ಭಾಗವಾಗಿಯೇ, ಕ್ರಮೇಣ ಸಮಾಜದ ಕಲ್ಪನೆಯೇ ಬದಲಾಗುತ್ತಾ; ಸಮಾಜವೆಂದರೆ ಏನು, ಯಾವುದು; ಅದನ್ನು ಮೂಲಘಟಕವನ್ನಾಗಿ ಗ್ರಹಿಸಲು ಪರಿಗಣಿಸಬೇಕಾದ ಅಂಶಗಳು ಯಾವುವು ಎಂಬ ಬಗ್ಗೆ ವಾದ-ವಿವಾದ-ಚಿಂತನೆಗಳು ಬೆಳೆಯುತ್ತಾ ಹೋಗಿವೆ. ಇದರ ಪರಿಣಾಮವಾಗಿ, ಸಮಾಜದ ಹಿತ ಎಂಬುದರ ಅರ್ಥವ್ಯಾಪ್ತಿಯೂ; ಅದಕ್ಕೆ ತಕ್ಕಂತೆ ಸಮಾಜವಾದದ ಸ್ವರೂಪವೂ, ವ್ಯಾಖ್ಯೆಯೂ ಬದಲಾಗುತ್ತ ಬಂದಿದೆ.

ಸಮಾಜವಾದದ ಮೂಲ ಆಶಯವಾದ ಸಾಮಾಜಿಕ ಸಮಾನತೆ ಎಂಬುದು, ಮನುಷ್ಯ ನಾಗರಿಕತೆ ಮತ್ತು ಸಂಸ್ಕೃತಿಗಳು ಮೂಡಿದಾಗಿನಿಂದಲೂ ಮನುಷ್ಯನಲ್ಲಿ ಕಂಡುಬಂದಿರುವ ಮೂಲ ತುಡಿತ. ಆದರೆ ಅದು ಒಂದು ಸಾಮಾಜಿಕ ಕಾರ್ಯಕ್ರಮವಾಗಿ ಜನರ ಕಲ್ಪನೆಯನ್ನು ಕೆರಳಿಸಿದ್ದು ೧೭೮೯ರ ಫ್ರೆಂಚ್ ಕ್ರಾಂತಿಯಿಂದಾಚೆಗೆ ಎಂದು ಹೇಳಲಾಗುತ್ತದೆ. ಅನೇಕ ಚಾರಿತ್ರಿಕ

ಕಾರಣಗಳಿಂದಾಗಿ, ಆಸ್ತಿ ಮತ್ತು ಅಧಿಕಾರಗಳ ಅಸಹಜ ಮತ್ತು ಅಸಮ ಸಂಬಂಧಗಳ ವೇದಿಕೆಯಾಗಿ ರೂಪುಗೊಂಡಿದ್ದ ರಾಜಶಾಹಿಯ ಬುಡವನ್ನು ಅಲುಗಾಡಿಸಿ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲು ಹಾಕಿದ ಕ್ರಾಂತಿಯದು. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳೆಂಬ ಹೊಸ ನಾಗರಿಕ ಮೌಲ್ಯಗಳನ್ನು ಜನರ ಮನಸ್ಸಿನಲ್ಲಿ ಬಿತ್ತಿದ ಮೊದಲ ಜಾಗತಿಕ ಕ್ರಾಂತಿಯದು. ಈ ಮೊದಲು ಜಗತ್ತಿನ ಇತಿಹಾಸದಲ್ಲಿ ಸಾಕ್ರೆಟಿಸ್, ಬುದ್ಧ, ಕ್ರಿಸ್ತ, ಪೈಗಂಬರರಿತ್ಯಾದಿಯಾಗಿ ಅನೇಕ ಮಹಾತ್ಮರು ವೈಚಾರಿಕ ನೆಲೆಯಲ್ಲಿ ಇದೇ ಮೌಲ್ಯಗಳನ್ನಾಧರಿಸಿದ ಕ್ರಾಂತಿಯನ್ನು ಉಂಟುಮಾಡಿದ್ದರಾದರೂ ಅವು ಹೆಚ್ಚು ಸ್ಥಳೀಯವೂ, ಮಾನಸಿಕ ನೆಲೆಯವೂ ಆಗಿದ್ದವು. ಆಸ್ತಿ-ಅಧಿಕಾರಗಳ ಸಂಬಂಧಗಳನ್ನು ಮೂಲಭೂತವಾಗಿ ಬದಲಾಯಿಸುವ ಆಶಯವನ್ನು ಅವು ಹೊಂದಿರಲಿಲ್ಲ. ಆದರೆ ಫ್ರೆಂಚ್ ಕ್ರಾಂತಿಯ ರೂವಾರಿ ರೂಸೋ, ಸಮಾನತೆಯನ್ನು ಕುರಿತ ಮನುಷ್ಯನ ಆದಿಮ ತುಡಿತವನ್ನು ತನ್ನ 'ಅಸಮಾನತೆಯನ್ನು ಕುರಿತ ಪ್ರಬಂಧ'ದಲ್ಲಿ ಒಂದು ಬೌದ್ಧಿಕ ಪರಿಕಲ್ಪನೆಯಾಗಿ ಮಂಡಿಸಿದ. ಆಸ್ತಿಯ ಕಲ್ಪನೆಯೇ ಸಮಾಜದಲ್ಲಿ ಸ್ಪರ್ಧೆ ಮತ್ತು ಸ್ವಹಿತಾಸಕ್ತಿಗಳ ಘರ್ಷಣೆಯಿಂದ ಹುಟ್ಟುವ ವೈರ, ಲಾಭದಾಸೆ ಮುಂತಾದ ಅಸಮಾನತೆಯ ಪ್ರೇರಕಗಳಿಗೆ ಕಾರಣ ಎಂದು ಸಾರಿ, ಆತ ಖಾಸಗಿ ಆಸ್ತಿ ಎಂಬುದರ ಕೆಡಕುಗಳ ಬಗ್ಗೆ ಜಗತ್ತಿನ ಗಮನ ಸೆಳೆದ.

ಬಂಡವಾಳ-ಮಾಲೀಕ-ಕಾರ್ಮಿಕ

ಇದೇ ಹೊತ್ತಿಗೆ ೧೫ನೇ ಶತಮಾನದಲ್ಲಿ ಯುರೋಪ್ ನಲ್ಲಿ 'ಜ್ಞಾನಯುಗ'ವನ್ನು ತೆರೆಯಿತೆಂದು ಹೇಳಲಾದ 'ಪುನರುಜ್ಜೀವನ' (Renaisance) ಸಂಭವಿಸಿತ್ತು. ಅದರ ಫಲವಾಗಿ ನಿರಂತರ

ಸಂಶೋಧನೆಗಳ ವೈಜ್ಞಾನಿಕ ಕ್ರಾಂತಿ ಆರಂಭವಾಗಿತ್ತು. ಅದರ ಪರಿಣಾಮವಾಗಿ, ಕೃಷಿ ಆರ್ಥಿಕತೆಯನ್ನಾಧರಿಸಿದ ಸಾಮುದಾಯಿಕ ಗುಲಾಮಿ-ಊಳಿಗಮಾನ್ಯಶಾಹಿ ವ್ಯವಸ್ಥೆಯ ಯೂರೋಪಿನ ಸಮಾಜ, ಕ್ರಮೇಣ ಕೈಗಾರಿಕಾ ಸಮಾಜವಾಗಿ ಪರಿವರ್ತಿತವಾಗುತ್ತಿತ್ತು. ಈ ಪರಿವರ್ತನೆ ವೈಯುಕ್ತಿಕ ನೆಲೆಯ ಬಂಡವಾಳ, ಮಾಲೀಕತ್ವ ಹಾಗೂ ಕಾರ್ಮಿಕ ಶಕ್ತಿಗಳಿಗೆ ಕಾರಣವಾಗಿತ್ತು. ಮಾಲೀಕರು ಹೆಚ್ಚು ಹೆಚ್ಚು ಲಾಭದಾಸೆಯಿಂದ, ಹೊಸ ಹೊಸ ವೈಜ್ಞಾನಿಕ ತಂತ್ರಗಳನ್ನು ಬಳಸಿ ಹೆಚ್ಚೆಚ್ಚು ಉತ್ಪಾದನೆ ಮಾಡಲು, ಹೆಚ್ಚೆಚ್ಚು ಹೂಡಿಕೆಗಾಗಿ ಹೆಚ್ಚೆಚ್ಚು ಬಂಡವಾಳ ಕ್ರೋಢೀಕರಿಸುವ ದೃಷ್ಟಿಯಿಂದ ಕಾರ್ಮಿಕರನ್ನು ಹೆಚ್ಚೆಚ್ಚು ದುಡಿಸತೊಡಗಿದ್ದರು. ಆದರೆ ಅದೇ ಹೊತ್ತಿಗೆ ಫ್ರೆಂಚ್ ಕ್ರಾಂತಿ ಬಿತ್ತಿದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ಮೌಲ್ಯಗಳು ಸೃಷ್ಟಿಸಿದ ಸಾಮಾಜಿಕ ವಾತಾವರಣ, ಈ ಕಾರ್ಮಿಕರಲ್ಲಿ 'ಶೋಷಣೆ' ಎಂಬ ಪರಿಕಲ್ಪನೆಯನ್ನು ಜಾಗೃತಗೊಳಿಸತೊಡಗಿತ್ತು. ಈ ಶೋಷಣೆಯ ನಿವಾರಣೆಗಾಗಿ ಮೂಡಿದ ಆಲೋಚನೆಗಳು, ಕಾರ್ಯಾಚರಣೆಗಳೇ ಮುಂದೆ 'ಸಮಾಜವಾದ' ಎಂಬ ಪರಿಕಲ್ಪನೆಯನ್ನು ಬೆಳೆಸಿದವು ಎಂದು ಹೇಳಬಹುದು.

ಹಾಗಾಗಿ ಸಮಾಜವಾದದ ಪರಿಕಲ್ಪನೆಯಲ್ಲಿ ಮಾಲೀಕ, ಬಂಡವಾಳ, ಉತ್ಪಾದನಾ ತಂತ್ರ ಮತ್ತು ಕಾರ್ಮಿಕ ಶಕ್ತಿ- ಈ ಮೂರು ಅಂಶಗಳು ಒಳಗೊಂಡಿದ್ದು, ಇವುಗಳ-ಅಂದರೆ ಸಮಾಜವೊಂದರ ಕ್ರಿಯಾಶೀಲತೆಯನ್ನು ಇಡಿಯಾಗಿ ಆವರಿಸುವ-ಸಂಬಂಧಗಳನ್ನು ಸಮರಸಗೊಳಿಸುವ ಪ್ರಯತ್ನ ವನ್ನೇ ಸಮಾಜವಾದ ಎಂದು ಸ್ಥೂಲವಾಗಿ ಕರೆಯಬಹುದು. ಈ ಜಿಜ್ಞಾಸೆಯ ಕೇಂದ್ರದಲ್ಲಿರುವುದು ಮಾಲೀಕನೆಂಬುವವನ ವೈಯಕ್ತಿಕ ಅಂದರೆ ಖಾಸಗಿಯಾದ ಹಿತಾಸಕ್ತಿ, ಅಂದರೆ ಆಸ್ತಿ

ಎಂಬುದನ್ನು ನಾವು ಗಮನಿಸಬೇಕು. ಹೀಗಾಗಿ ಸಮಾಜವಾದದ ಮುಖ್ಯ ಕಾಳಜಿ ಈ ಖಾಸಗಿ ಆಸ್ತಿ ಎಂಬ ಪರಿಕಲ್ಪನೆಯನ್ನು, ಅದು ಶೋಷಣೆಗೆ ಕಾರಣವಾಗದಂತೆ ಹೇಗೆ ಪಳಗಿಸಬಹುದು ಎಂಬುದೇ ಆಗಿದೆ.

ಸಮಾಜವಾದಿ ತಾತ್ವಿಕತೆಯ ವಿಕಾಸ

ಕೈಗಾರೀಕರಣ ಭರದಿಂದ ಸಾಗಿದ್ದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಈ ದಿಸೆಯಲ್ಲಿ ಪ್ರಯತ್ನಗಳು ನಡೆದವು. ಇದರ ಭಾಗವಾಗಿ ಹೊಸ ತತ್ವಜ್ಞಾನ ಮತ್ತು ಅರ್ಥಶಾಸ್ತ್ರಗಳೂ ಬೆಳೆದವು. ಹೆಗಲ್ ಎಂಬ ಜರ್ಮನ್ ತತ್ವಜ್ಞಾನಿ, ಮನುಷ್ಯನ ಪ್ರಜ್ಞಾ ಸ್ಫೋಟವೇ ಮನುಷ್ಯನ ಹೊಸ ಹೊಸ ಮಾದರಿಗಳ ಕ್ರಿಯಾಶೀಲತೆಗೆ; ಅಂದರೆ ಪರಿಸರಕ್ಕೆ ಕಾರಣವಾಗಿ ಚರಿತ್ರೆ ಸಂಭವಿಸುವುದು ಎಂದು ನಿರೂಪಿಸಿದ. ಜೊತೆಗೆ ಇದೇ ಹೊತ್ತಿಗೆ ಯೂರೋಪ್‌ನಲ್ಲಿ ಆರಂಭವಾದ ರಾಷ್ಟ್ರೀಯತಾ ಚಳುವಳಿಗಳು ಪ್ರಜಾಪ್ರಭುತ್ವದ ವಿವಿಧ ಮಾದರಿಗಳನ್ನು ಆವಿಷ್ಕರಿಸತೊಡಗಿದ್ದವು. ಈ ಎಲ್ಲ ಹಿನ್ನೆಲೆಯಲ್ಲಿ ಸಮಾಜವಾದಿ ರಾಜಕಾರಣದ ಹೊಳಹುಗಳು ರೂಪುಗೊಳ್ಳುತ್ತಾ ಹೋದವು. ಸ್ಯಾಂ ಸಿಮೋಂ ಎಂಬ ಫ್ರೆಂಚ್ ಸಮಾಜವಾದಿ ಚಿಂತಕ, ಧರ್ಮ ಮತ್ತು ವಿಜ್ಞಾನಗಳ ಸಮನ್ವಯದಿಂದ ಶೋಷಣೆಗೆ ಕಡಿವಾಣ ಹಾಕಬಹುದೆಂದರೆ, ಶಾರ್ಲ್ ಫೂರಿಯೇ ಎಂಬ ಇನ್ನೊಬ್ಬ ಫ್ರೆಂಚ್ ಚಿಂತಕ ಆದಾಯದ ಮೇಲೆ ನಿಯಂತ್ರಣವಿರುವ ಉದಾರವಾದಿ ಸಾಮುದಾಯಿಕ ಬದುಕನ್ನು ಸಮಾಜವಾದ ವೆಂದು ಪ್ರತಿಪಾದಿಸಿದ. ಇಂಗ್ಲೆಂಡಿನ ರಾಬರ್ಟ್ ಓವನ್ ಸಹಕಾರಿ ತತ್ವದ ಮಾಲೀಕತ್ವವನ್ನು ಆವಿಷ್ಕರಿಸಿದನಲ್ಲದೆ, ಅಂತಹ ಅನೇಕ ಕೈಗಾರಿಕಾ ಗ್ರಾಮಗಳನ್ನು ಸೃಷ್ಟಿಸಿ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳ ಪರಿಕಲ್ಪನೆಗೆ ದಾರಿ ಮಾಡಿಕೊಟ್ಟ.

ಈ ಮಧ್ಯೆ ಮಾರ್ಕ್ಸ್ ಎಂಬ ಜರ್ಮನ್ ತತ್ವಶಾಸ್ತ್ರಜ್ಞ, ಇಂಗ್ಲೆಂಡ್‌ನ ಎಂಗೆಲ್ಸ್ ಎಂಬ ಅರ್ಥಶಾಸ್ತ್ರಜ್ಞನ ಜೊತೆಗೂಡಿ ಬಂಡವಾಳದ ಬೆಳವಣಿಗೆ ಕುರಿತು ಒಂದು ಅಧ್ಯಯನ ನಡೆಸಿದ. ಬಂಡವಾಳವಾದ ಎಂಬ ಪರಿಕಲ್ಪನೆಯನ್ನು ಮುಂದಿಟ್ಟ. ಅದು ತನ್ನ ಒಳಗಿನ ವಿರೋಧಾಭಾಸಗಳಿಂದಲೇ-ಕಾರ್ಮಿಕರಿಗೆ ತಂದೊಡ್ಡುವ ಹಲವು ಬಗೆಯ ತೊಂದರೆಗಳಿಂದಾಗಿಯೇ-ಹೇಗೆ ಕಾರ್ಮಿಕರ ತೀವ್ರ ಸಂಘಟನೆಗೆ ಕಾರಣವಾಗಿ, ಖಾಸಗಿ ಆಸ್ತಿಯ ಪರಿಕಲ್ಪನೆಯನ್ನು ನಾಶಮಾಡಬಲ್ಲುದು ಎಂದು ವಿವರಿಸಿದ. ಇದಕ್ಕಾಗಿ ಆತ ಹೆಗೆಲ್‌ನ, ಮನುಷ್ಯನ ಪ್ರಜ್ಞಾ ಸ್ಫೋಟದಿಂದ ಕ್ರಿಯಾಶೀಲತೆ(ಅಥವಾ ಪರಿಸರ) ಮೂಡುತ್ತದೆ ಎಂಬ ಕಾಣ್ಕೆಯನ್ನು, ಕ್ರಿಯಾಶೀಲತೆಯಿಂದ ಪ್ರಜ್ಞಾ ವಿಕಾಸವಾಗುತ್ತದೆ ಎಂದು ಪರಿಷ್ಕರಿಸಿದ. ಇದರ ಮುಂದುವರಿಕೆಯಾಗಿ ಇತಿಹಾಸದಲ್ಲಿ ವರ್ಗಗಳು ಸೃಷ್ಟಿಯಾದ ಬಗೆಯನ್ನೂ ಮತ್ತು ಅವು ವಿವಿಧ ಘಟ್ಟಗಳಲ್ಲಿ ತಂತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ನಡೆಸಿದ ಪರಸ್ಪರ ಹೋರಾಟಗಳ ಇತಿಹಾಸವೇ ಜಗತ್ತಿನ ಇತಿಹಾಸವಾಗಿದೆ ಎಂದು ನಿರೂಪಿಸಿದ. ಹಾಗೇ ಸದ್ಯದ ಬಂಡವಾಳ ಯುಗದ ಮಾಲೀಕ-ಕಾರ್ಮಿಕ ವರ್ಗಗಳ ನಡುವಣ ಹೋರಾಟವೇ; ಅದಕ್ಕೆ ಪೂರಕವಾಗಿರುವ ವಿಜ್ಞಾನ-ತಂತ್ರಜ್ಞಾನಗಳ ಅಪೂರ್ವ ಕ್ರಾಂತಿಕಾರಕತೆಯಿಂದಾಗಿ, ಆತ್ಯಂತಿಕ ವರ್ಗ ಹೋರಾಟವಾಗಿದೆ. ಈ ಹೋರಾಟವನ್ನು ಕಾರ್ಮಿಕರ ಸರ್ವಾಧಿಕಾರವನ್ನು ಸ್ಥಾಪಿಸುವಂತೆ ಸಂಘಟಿಸುವುದಾದಲ್ಲಿ, ಅಂತಿಮವಾಗಿ ಅದು ಪ್ರಭುತ್ವ ರೂಪದ ರಾಜ್ಯವ್ಯವಸ್ಥೆಯೇ ನಶಿಸಿಹೋಗುವಂತೆ ಮಾಡುವುದು ಎಂಬ ಭವಿಷ್ಯವಾಣಿ ನುಡಿದ. ಇದಕ್ಕೆ ಸ್ಫೂರ್ತಿಶಕ್ತಿಯಾಗಿ 'ಕಮ್ಯೂನಿಸ್ಟ್ ಪ್ರಣಾಳಿಕೆ' ಎಂಬ ವ್ಯವಸ್ಥಿತ ಕಾರ್ಯಕ್ರಮವೊಂದನ್ನು ಪ್ರಚುರಪಡಿಸಿ, ಜಾಗತಿಕ ಕಾರ್ಮಿಕ

ಕ್ರಾಂತಿಯ ಕಹಳೆಯನ್ನು ಮೊಳಗಿಸಿದ. ಇದರ ಹಿಂದಿದ್ದ ವೈಚಾರಿಕ ಶಿಸ್ತಿನಿಂದಾಗಿ ಇದನ್ನು ವೈಜ್ಞಾನಿಕ ಸಮಾಜವಾದ ಎಂದು ಕರೆಯಲಾಯಿತು.

ಆದರೆ ಲೂಯಿ ಬ್ಲೊಂಕ್ ಎಂಬ ಜರ್ಮನಿಯ ಇನ್ನೊಬ್ಬ ಸಮಾಜವಾದಿ ಚಿಂತಕ, ಈ ಕಾರ್ಮಿಕ ಕ್ರಾಂತಿಯ ಒಡಲಲ್ಲೇ ಹೊಸ ಪಟ್ಟಭದ್ರ ಹಿತಾಸಕ್ತಿಯ ವರ್ಗವೊಂದರ ಹುಟ್ಟನ್ನು ಕಂಡ. ಹಾಗಾಗಿ ಅವನು ವರ್ಗ ಹೋರಾಟದ ಮೂಲಕ ಕಾರ್ಮಿಕರ ಸರ್ವಾಧಿಕಾರಕ್ಕೆ ಬದಲಾಗಿ, ಪ್ರಜಾಸತ್ತಾತ್ಮಕ ರಾಜಕೀಯ ಶಿಕ್ಷಣ ಮತ್ತು ಕಾರ್ಯಾಚರಣೆಗಳ ಮೂಲಕ ವರ್ಗಗಳ ಸಮೀಪೀಕರಣ ವನ್ನು ಪ್ರತಿಪಾದಿಸಿದ. ಕಾರ್ಮಿಕರಿಗೆ ಬಂಡವಾಳವನ್ನು ನಿರ್ವಹಿಸುವ ಅಧಿಕಾರ ನೀಡಿ ಬಂಡವಾಳವನ್ನು ಪಳಗಿಸಬಹು ದೆಂಬುದು ಅವನ ಆಲೋಚನೆ. ವ್ಯಕ್ತಿ ಸ್ವಾತಂತ್ರ್ಯ ಹಾಗೂ ದುಡಿಮೆಯ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಹತ್ತಿಕ್ಕುವ ಯಾವುದೇ ಸಮಾಜ, ಸಮಾನತೆ ಮತ್ತು ಸೋದರತೆಗಳನ್ನು ಸಾಧಿಸಲಾರದು ಎನ್ನುವ ಬ್ಲೊಂಕ್‌ನ ಈ ಸಮಾಜವಾದಿ ಚಿಂತನೆ, ಪ್ರಜಾಸತ್ತಾತ್ಮಕ ಸಮಾಜವಾದ ಎನ್ನಿಸಿಕೊಂಡಿತು. ಹೀಗೆ ೧೮ನೇ ಹಾಗೂ ೧೯ನೇ ಶತಮಾನಗಳಲ್ಲಿ ಯೂರೋಪ್‌ನಲ್ಲಿ ಕಂಡುಬಂದ ಕ್ರಾಂತಿಕಾರಕ ಚಿಂತನೆ, ವೈಜ್ಞಾನಿಕ ಆವಿಷ್ಕಾರ, ಕೈಗಾರಿಕೀಕರಣ ಮತ್ತು ವಿವಿಧ ರಾಷ್ಟ್ರೀಯತೆಗಳ ಉದಯ ಮುಂತಾದ ಅನೇಕ ನೆಲೆಗಳ ಆಂದೋಲನಗಳ ರಾಜಕೀಯ ಕಾವಿನಲ್ಲಿ ಸಮಾಜವಾದ ಹಲವು ರೀತಿಯ ವಿವರಣೆಗಳಿಗೆ ಸಿಕ್ಕಿ ಬಹುರೂಪಿಯಾಯಿತು. ಈ ಬಹುರೂಪಿ ಸಮಾಜವಾದ ೨೦ನೇ ಶತಮಾನದ ಆರಂಭದಲ್ಲಿ ರಷ್ಯಾದಲ್ಲಿ ಸಂಭವಿಸಿದ 'ಕಮ್ಯೂನಿಸ್ಟ್ ಕ್ರಾಂತಿ'ಯಿಂದಾಗಿ ಒಂದು ಜಾಗತಿಕ ರಾಜಕೀಯ ತತ್ವ ಹಾಗೂ ಕಾರ್ಯಕ್ರಮವಾಗಿ ಅಧಿಕೃತ ಮುದ್ರೆಯನ್ನೂ ಪಡೆಯಿತು.

ಭಾರತೀಯ ಸಮಾಜವಾದ

ಸಮಾಜವಾದದ ಬಹುರೂಪಗಳಲ್ಲಿ ಭಾರತೀಯ ಸಮಾಜವಾದವೂ ಒಂದು. ಯೂರೋಪ್‌ನಲ್ಲಿ ಸಮಾಜವಾದ ಕೈಗಾರಿಕೀಕರಣ ಮತ್ತು ಅದರ ಸಂಕೀರ್ಣ ಪರಿಣಾಮಗಳ ಲ್ಲೊಂದಾದ ರಾಷ್ಟ್ರೀಯತಾವಾದಿ ಆಂದೋಲನಗಳ ಮಧ್ಯೆ ತನ್ನ ಹುಟ್ಟನ್ನು, ರೂಪವನ್ನು ಕಂಡುಕೊಂಡರೆ, ಭಾರತೀಯ ಸಮಾಜವಾದ ಹುಟ್ಟಿ ಬೆಳೆದಿದ್ದು ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ. ಇದು ಒಂದು ನೆಲೆಯಲ್ಲಿ ರಾಷ್ಟ್ರೀಯ ಆಂದೋಲನವಾಗಿದ್ದರೂ ಅದು ಮೂಲತಃ ವಸಾಹತುಶಾಹಿ ವಿರೋಧಿ ಆಂದೋಲನವೂ ಆಗಿತ್ತು; ಹಾಗೆಯೇ ಭರತಖಂಡ, ಕಳೆದುಹೋಗಿದ್ದ ತನ್ನ ಸಾಂಸ್ಕೃತಿಕ ಗುರುತನ್ನು ಮರಳಿ ಪಡೆಯುವ ಹಾಗೂ ರಾಜಕೀಯವಾಗಿ ತನ್ನನ್ನು ತಾನು ಪುನರ್ರೂಪಿಸಿಕೊಳ್ಳುವ ಆಂದೋಲನವೂ ಆಗಿತ್ತು ಎಂಬುದನ್ನು ನಾವು ಮರೆಯಬಾರದು. ಹೀಗಾಗಿ ಭಾರತೀಯ ಸಮಾಜವಾದ ಒಂದು ರಾಜಕೀಯ ಚಿಂತನೆಯಾಗಿ ಈ ಎಲ್ಲ ಜವಾಬ್ದಾರಿಗಳನ್ನು ಒಳಗೊಂಡು ಬೆಳೆಯಬೇಕಾಯಿತು. ಇದರ ಪ್ರಮುಖ ಪ್ರತಿಪಾದಕರೆಂದು ಆಚಾರ್ಯ ನರೇಂದ್ರದೇವ, ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾರನ್ನು ಗುರುತಿಸಿ ಲಾಗುವುದಾದರೂ, ಭಾರತೀಯ ಸಮಾಜವಾದ ಎಂದರೆ ಲೋಹಿಯಾ ಎಂದೇ ಆಗಿದ್ದರೆ; ಅದಕ್ಕೆ ಹಲವು ಕಾರಣಗಳಿವೆ.

ಮುಖ್ಯವಾಗಿ, ಈ ಮೂವರಲ್ಲಿ ಮೊದಲಿಬ್ಬರು ಮಾರ್ಕ್ಸ್‌ವಾದಿಗಳಾಗಿಯೇ ಭಾರತೀಯ ಸಮಾಜವಾದಿ ಆಂದೋಲನವನ್ನು ಕಟ್ಟ ಹೊರಟವರು. ಇವರಲ್ಲಿ ನರೇಂದ್ರದೇವ ಭಾರತೀಯ ಸಮಾಜವಾದವೆಂಬುದು ಸ್ವಾತಂತ್ರ್ಯೋತ್ತರ

ಭಾರತದಲ್ಲಿ ಪೂರ್ಣ ಅರಳುವ ಮುನ್ನವೇ ಅಸು ನೀಗಿದರು. ಇನ್ನು ಜಯಪ್ರಕಾಶರು ಸ್ವಾತಂತ್ರ್ಯೋತ್ತರ ಭಾರತದ ಮೊದಲ ದಶಕ ಪೂರ್ಣವಾಗುವ ಮುನ್ನವೇ ಮಾರ್ಕ್ಸ್‌ವಾದದಿಂದ ಜನತಾಂತ್ರಿಕ ಸಮಾಜವಾದದೆಡೆಗೆ, ನಂತರ ಪೂರ್ಣವಾಗಿ ಗಾಂಧಿವಾದದೆಡೆಗೆ ಸರಿದು ಪಕ್ಷ ರಾಜಕಾರಣವನ್ನೇ ತೊರೆದರು; ಸರ್ವೋದಯ ಚಳುವಳಿಗೆ ಸೇರಿದರು. ಹೀಗಾಗಿ ಭಾರತೀಯ ಸಮಾಜವಾದಿ ಚಳುವಳಿಗೆ ಒಂದು ನಿರ್ದಿಷ್ಟ ತಾತ್ವಿಕತೆ ಹಾಗೂ ರೂಪ ಕೊಟ್ಟವರು ಲೋಹಿಯಾರೆಂದೇ ಹೇಳಬೇಕು. ಇವರ ಜೊತೆಗೆ ಅಶೋಕ ಮೆಹತಾ, ಯೂಸುಫ್ ಮೆಹ್ರೋಲಿ, ಅಚ್ಯುತ ಪಟವರ್ಧನ್, ಎನ್.ಜಿ. ಗೋರೆ, ಎಸ್.ಎಂ. ಜೋಷಿ, ನಾಥ್ ಪೈ, ಕಮಲಾದೇವಿ ಚಟ್ಟೋಪಾಧ್ಯಾಯ, ಮಧು ಲಿಮಯೆ, ಮಧು ದಂಡವತೆ, ಪ್ರೇಂ ಭಾಸಿನ್, ಕಿಷನ್ ಪಟ್ನಾಯಕ್, ಸುರೇಂದ್ರಮೋಹನ್ ಮುಂತಾದವರನ್ನು ಹೆಸರಿಸಬಹುದಾದರೂ ಇವರ ತಾತ್ವಿಕ ಕೊಡುಗೆಗಳನ್ನು ಭಾರತೀಯ ಸಮಾಜವಾದಕ್ಕೆ ಪೂರಕ ಕೊಡುಗೆಗಳೆಂದಷ್ಟೇ ಪರಿಗಣಿಸಬಹುದು.

ಮಾರ್ಕ್ಸ್‌ವಾದ ಮತ್ತು ಸಮಾಜವಾದ

೨೦ನೇ ಶತಮಾನದ ಮುವ್ವತ್ತರ ದಶಕದಲ್ಲಿ ಭಾರತದಲ್ಲಿ ಸಮಾಜವಾದದ ಅಡಿಗಲ್ಲು ಹಾಕಿದವರು ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ್ ನಾರಾಯಣರಂತಹ ಪ್ರಖರ ಮಾರ್ಕ್ಸ್‌ವಾದಿಗಳೇ ಆಗಿದ್ದರೂ, ಸಮಾಜವಾದಿಗಳು ಆ ಹೊತ್ತಿಗಾಗಲೇ ಭಾರತದಲ್ಲಿ ಎಂ.ಎನ್.ರಾಯ್ ಅವರ ವೈಚಾರಿಕ ಮತ್ತು ಎಸ್.ಎ. ಡಾಂಗೆ ಅವರ ಹೋರಾಟದ ನೇತೃತ್ವದಲ್ಲಿ ಸಕ್ರಿಯವಾಗಿದ್ದ ಕಮ್ಯುನಿಸ್ಟ್ ಚಳುವಳಿಯೊಂದಿಗೆ ಗುರುತಿಸಿಕೊಳ್ಳ ಬಯಸಲಿಲ್ಲ. ಇದಕ್ಕೆ ಮುಖ್ಯ ಕಾರಣ, ಕಮ್ಯೂನಿಸ್ಟರು ಗಾಂಧೀ ನೇತೃತ್ವದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಅವಹೇಳನ

ಮಾಡುತ್ತಾ ಜಾಗತಿಕ ಕಾರ್ಮಿಕ ಕ್ರಾಂತಿಯ ಹೆಸರಲ್ಲಿ ಹಿಂಸಾಚಾರಗಳಲ್ಲಿ ತೊಡಗಿದ್ದುದು. ನಿಜ, ಸಮಾಜವಾದಿ ಚಳುವಳಿಯನ್ನು ಆರಂಭಿಸಿದವರು, ಗಾಂಧೀಜಿಯ ಸಾವಧಾನ ಗತಿಯ ಅಹಿಂಸಾತ್ಮಕ ಚಳುವಳಿಯಿಂದ ಸಹನೆ ಕಳೆದುಕೊಂಡ ಯುವಜನರೇ. ಆದರೆ ಅವರು ಗಾಂಧೀಜಿಯ ವಿರಾಟ್ ವ್ಯಕ್ತಿತ್ವವನ್ನು ಧಿಕ್ಕರಿಸಲಾಗದೇ ಅವರೊಂದಿಗೆ ಬಿಚ್ಚು ಮನಸ್ಸಿನಿಂದ ಸಂವಾದಿಸುತ್ತಲೇ, ರಾಷ್ಟ್ರೀಯ ಆಂದೋಲನದ ಚೌಕಟ್ಟು ಮತ್ತು ಸ್ಫೂರ್ತಿಗಳಿಂದಲೇ ಸಮಾಜವಾದವನ್ನು ನಿರೂಪಿಸುತ್ತಾ ಹೋದರು. ಹೀಗಾಗಿ ಗಾಂಧೀಜಿಯ ಸಾವಿನವರೆಗೂ ಸಮಾಜವಾದಿ ಆಂದೋಲನ ಕಾಂಗ್ರೆಸ್ ಆಂದೋಲನದ ಭಾಗವಾಗಿಯೇ, ಅದರ ಭಿನ್ನಮತೀಯ ಮುಖವಾಗಿಯೇ ಬೆಳೆಯಿತು. ೧೯೪೮ರಲ್ಲಷ್ಟೇ ಕಾಂಗ್ರೆಸ್ಸಿನ ಪಟ್ಟಭದ್ರರ ಒತ್ತಡ ರಾಜಕಾರಣದಿಂದಾಗಿ ಅವರು ಸಮಾಜವಾದಿ ಎಂಬ ಪಕ್ಷ ಸ್ಥಾಪಿಸಿಕೊಂಡು ಕಾಂಗ್ರೆಸ್ ರಾಜಕಾರಣದ ವಿರುದ್ಧ ಸೆಟೆದು ನಿಂತರು. ಲೋಹಿಯಾರಂತೂ ಕಾಂಗ್ರೆಸ್ ಬಿಡುವಾಗ 'ಅದು ನಾವೆಲ್ಲ ಸೇರಿ ಕಟ್ಟಿದ ಮನೆ. ಆದರೆ ಹಿರಿಯರ ಆಟಾಟೋಪ ದಿಂದಾಗಿ ನಾವು ನಮ್ಮ ಪಾಲು ಪಡೆದುಕೊಳ್ಳದೆ ಆ ಮನೆಯನ್ನು ತೊರೆಯಬೇಕಾಗಿದೆ' ಎಂದು ವಿಷಾದದಿಂದ ಹೇಳಿದರು. ಬಹುಶಃ ಸಮಾಜವಾದಿಗಳು ಹೀಗೆ ಕಾಂಗ್ರೆಸ್ಸನ್ನು ತೊರೆಯುಂತಹ ಪರಿಸ್ಥಿತಿ ಉಂಟಾಗದಿದ್ದರೆ, ಸ್ವಾತಂತ್ರ್ಯೋತ್ತರ ಭಾರತದ ಚಿತ್ರ ಬೇರೆಯೇ ಇರುತ್ತಿತ್ತೇನೋ!

ಅದೇನೇ ಇರಲಿ, ಹೀಗೆ ಕಾಂಗ್ರೆಸ್‌ನಿಂದ ಹೊರಬಂದ ಸಮಾಜವಾದಿ ಪಕ್ಷ ೧೯೫೨ರ ಪ್ರಥಮ ಸಾರ್ವತ್ರಿಕ ಚುನಾವಣೆ ಗಳವರೆಗೂ ತನ್ನನ್ನು ತಾನು ತಾತ್ವಿಕವಾಗಿ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವೆಂದೇ ಕರೆದುಕೊಳ್ಳುತ್ತಿತ್ತು. ಆದರೆ ಕಾಂಗ್ರೆಸ್‌ಗೆ

ಪರ್ಯಾಯ ತಾನೇ ಎಂದು ನಂಬಿಕೊಂಡಿದ್ದ ಈ ಪಕ್ಷಕ್ಕೆ ಈ ಚುನಾವಣೆಗಳಲ್ಲಿ ಭಾರೀ ಸೋಲುಂಟಾದಾಗ, ಅದು ಗಾಬರಿಗೊಂಡು ತನ್ನನ್ನು ತಾನೇ ಒಳ-ಹೊರಗೆ ನೋಡಿಕೊಂಡಿತು. ಒಟ್ಟು ಮತಗಳಲ್ಲಿ ಎರಡನೇ ಸ್ಥಾನದಲ್ಲಿದ್ದರೂ, ಸಂಸದೀಯ ಸ್ಥಾನಗಳ ಲೆಕ್ಕದಲ್ಲಿ ಪಕ್ಷ ಕಮ್ಯೂನಿಸ್ಟ್ ಪಕ್ಷದ ನಂತರ ಮೂರನೇ ಸ್ಥಾನ ಪಡೆದಿತ್ತು. ಇದರ ಪರಿಣಾಮವಾಗಿ ಚುನಾವಣೆ ನಂತರ ಪಂಚಮಢಿಯಲ್ಲಿ ಚುನಾವಣಾ ಫಲಿತಾಂಶಗಳ ಅವಲೋಕನಕ್ಕೆಂದೇ ಪಕ್ಷದ ವಿಶೇಷ ಅಧಿವೇಶನ ಏರ್ಪಡಿಸಲಾಗಿತ್ತು. ಚೀನಾ ಪ್ರವಾಸದಲ್ಲಿದ್ದ ಆಚಾರ್ಯ ನರೇಂದ್ರದೇವ ಅವರ ಅನುಪಸ್ಥಿತಿಯಲ್ಲಿ ಲೋಹಿಯಾ ಮಾಡಿದ ಈ ಸಮಾವೇಶದ ಅಧ್ಯಕ್ಷ ಭಾಷಣ, ಪಕ್ಷದ ದಿಕ್ಕು ದಿಸೆಗಳನ್ನೇ ಬದಲಾಯಿಸಿತು. 'ಭಾರತೀಯ ಸಮಾಜವಾದದ ತಾತ್ವಿಕ ಅಡಿಗಲ್ಲು' ಎಂದೇ ಪ್ರಸಿದ್ಧವಾಗಿರುವ ಈ ಭಾಷಣ, ಸಮಾಜವಾದಿಗಳ ಮಧ್ಯದ ಅಂದಿನ ಮಾರ್ಕ್ಸ್ ಪರ ಅಥವಾ ವಿರೋಧಿ ಅಥವಾ ಗಾಂಧಿ ಅಥವಾ ವಿರೋಧಿ ಪರಿಭಾಷೆಗೆ ಸಂಪೂರ್ಣವಾಗಿ ವಿದಾಯ ಹೇಳಿತ್ತು. ಬದಲಿಗೆ. ಭಾರತದ ಚರಿತ್ರೆ ಮತ್ತು ವರ್ತಮಾನಗಳನ್ನು ಪರಿಗಣಿಸಿ, ಹೇಗೆ ಸಮಾಜವಾದವನ್ನು ಪುನರ್ರೂಪಿಸಿಕೊಳ್ಳಬೇಕು ಎಂಬುದರ ಹೊಳಹುಗಳನ್ನು ನೀಡಿತು. ಮುಖ್ಯವಾಗಿ, ಜಾತಿ ಸಮಾಜವಾಗಿರುವ ಭಾರತದಲ್ಲಿ ವರ್ಗವನ್ನು ಗುರುತಿಸುವ ಬಗೆ, ಬಂಡವಾಳ ಕ್ರೋಢೀಕರಣವಾಗುತ್ತಿರುವ ಈ ದೇಶದಲ್ಲಿ ಉತ್ಪಾದನೆಗಾಗಿ ಅನುಸರಿಸಬೇಕಾದ ತಂತ್ರಜ್ಞಾನದ ಮಾದರಿ ಹಾಗೂ ಕೃಷಿ ಪ್ರಧಾನ ಆರ್ಥಿಕತೆಯಲ್ಲಿ ಕೈಗೊಳ್ಳಬೇಕಾದ ಕೈಗಾರಿಕೀಕರಣದ ಸ್ವರೂಪ ಮತ್ತು ಈ ಎಲ್ಲ ವಿಭಿನ್ನತೆಗಳ ಹಿನ್ನೆಲೆಯಲ್ಲಿ ವರ್ಗ ಹೋರಾಟವನ್ನು ಸಂಘಟಿಸಲು ಅನುಸರಿಸಬೇಕಾದ ಮಾರ್ಗ-ಇವುಗಳನ್ನು ಲೋಹಿಯಾ

ಪ್ರಸ್ತಾಪಿಸಿದ್ದರು. ವಿಶೇಷವೆಂದರೆ, ಇದಕ್ಕೆ ಪೂರಕವಾದ ಅಧ್ಯಯನ ಮತ್ತು ಚರ್ಚೆಗಳಿಗಾಗಿ ಅವರು 'ಸಮಾಜವಾದಿ ಆಶ್ರಮ'ಗಳ ಪರಿಕಲ್ಪನೆಯನ್ನು ಮುಂದಿಟ್ಟಿದ್ದರು!

ಆಶ್ಚರ್ಯವೆಂದರೆ, ಪಕ್ಷದೊಳಗಿನ ಮಾರ್ಕ್ಸ್‌ವಾದಿಗಳ ನಾಯಕರಾಗಿದ್ದ ಜಯಪ್ರಕಾಶ್ ನಾರಾಯಣ್ ಲೋಹಿಯಾರ ವಿಚಾರಗಳನ್ನು ತುಂಬು ಮನದಿಂದ ಅನುಮೋದಿಸಿದರು. ಆದರೆ ಕ್ರಾಂತಿಯ ಏಕೈಕ ಮಾರ್ಗ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಮಾರ್ಗ ಎಂದು ನಂಬಿದ್ದ ಅನೇಕ ಕಾರ್ಯಕರ್ತರು ಇದಕ್ಕೆ ವಿರೋಧ ವ್ಯಕ್ತಪಡಿಸಿ ಕೋಲಾಹಲವೆಬ್ಬಿಸಿದರು. ಆದರೆ ನಂತರ ಹರ್ದೋಯಿ ಎಂಬಲ್ಲಿ ನಡೆದ ಪಕ್ಷದ ವಾರ್ಷಿಕ ಅಧಿವೇಶನದಲ್ಲಿ ಹಾಜರಾದ, ಸ್ವತಃ ಪ್ರಖರ ಮಾರ್ಕ್ಸ್‌ವಾದಿ ಎನಿಸಿದ್ದ ಹಿರಿಯ ನಾಯಕ ಆಚಾರ್ಯ ನರೇಂದ್ರದೇವ ಅವರು, ಲೋಹಿಯಾರ ಭಾಷಣ ಹೇಗೆ ಮಾರ್ಕ್ಸ್‌ವಾದ ಜಡ ತತ್ವವಾಗಿರದೆ ಸಮಾನತೆಯ ಹೊಸ ಹೊಸ ನಿರೂಪಣೆಗಳನ್ನು ಸಾಧ್ಯ ಮಾಡಿಕೊಡಬಲ್ಲುದು ಎಂಬುದರ ಸೃಜನಶೀಲ ಉದಾಹರಣೆಯಾಗಿದೆ ಎಂಬುದನ್ನು ವಿವರಿಸಿದಾಗ ಕೋಲಾಹಲ ತಣ್ಣಗಾಯಿತು. ಆದರೂ ನಂತರದ ದಿನಗಳಲ್ಲಿ ಹಲವರು ಪಕ್ಷ ಬಿಟ್ಟು ಕಮ್ಯುನಿಸ್ಟ್ ಪಕ್ಷ ಸೇರಿದರು. ಅವರಲ್ಲಿ ಅರುಣಾ ಅಸೀಫ್ ಅಲಿ ಪ್ರಮುಖರು.

–೪–

ಅನ್ವೇಷಕ ಪ್ರವೃತ್ತಿಯ ಅಲೆಮಾರಿ

ಲೋಹಿಯಾಗೆ ಹೀಗೆ ಪಕ್ಷಕ್ಕೆ ಹೊಸ ನೀತಿ–ನಿರ್ದೇಶನ ನೀಡಲು ಸಾಕಷ್ಟು ಸಿದ್ಧತೆಯೂ ಇತ್ತು. ಗಾಂಧಿ ಪ್ರಭಾವಕ್ಕೆ ಸಿಕ್ಕಿ ತನ್ನ ಇದ್ದ ಬದ್ದ ಆಸ್ತಿಯನ್ನು ಸ್ವಾತಂತ್ರ್ಯ ಆಂದೋಲನಕ್ಕೆ ನೀಡಿದ ಮಾರವಾಡಿ ಕುಟುಂಬವೊಂದರಲ್ಲಿ ೧೯೧೦ರ ಮಾರ್ಚ್

೨೩ರಂದು ಜನಿಸಿದ ಲೋಹಿಯಾ, ತಮ್ಮ ತಂದೆ ಹೀರಾಲಾಲರ ಜೊತೆಯಲ್ಲಿದ್ದುಕೊಂಡು ಸ್ವಾತಂತ್ರ್ಯ ಹೋರಾಟವನ್ನು ಹತ್ತಿರದಿಂದ ಕಂಡವರು. ಶಾಲಾ ಬಾಲಕರಾಗಿದ್ದಾಗಲೇ ತಿಲಕರ ನಿಧನ ಹಾಗೂ ಅನಂತರ ಅಸಹಕಾರ ಚಳುವಳಿ ಸಂದರ್ಭದಲ್ಲಿ ಸಹ-ವಿದ್ಯಾರ್ಥಿಗಳನ್ನು ಸಂಘಟಿಸಿ ಬೀದಿಗಿಳಿದವರು. ಒಮ್ಮೆ ಮುಂಬೈನಲ್ಲಿ ತಂದೆಯೊಂದಿಗೆ ಗಾಂಧೀಜಿಯ ದರ್ಶನ ಮಾಡಿ ಅವರಿಂದ ಆಶೀರ್ವಾದ ಪಡೆದಿದ್ದರು. ಎಲ್ಲ ವಿದ್ಯಾರ್ಥಿಗಳು ದೊಡ್ಡ ಪರೀಕ್ಷೆ ಪಾಸು ಮಾಡಿ ದೊಡ್ಡ ಅಧಿಕಾರಿಯಾಗಲು ಹವಣಿಸುತ್ತಿದ್ದರೆ ತಾವು ಜಗತ್ತಿನ ದೊಡ್ಡ ಮನುಷ್ಯರಾಗುವ ಗುರಿ ಹೊಂದಿರುವುದಾಗಿ ಹೇಳಿಕೊಳ್ಳುತ್ತಾ, ಔಪಚಾರಿಕ ಪರೀಕ್ಷೆಗಳ ಕಡೆ ಗಮನವೇ ಕೊಡದ ಅನೌಪಚಾರಿಕ ಅನ್ವೇಷಕ ಪ್ರವೃತ್ತಿಯ ಅಲೆಮಾರಿ ಅವರು. ಇದರಿಂದಾಗಿಯೇ ಅವರು ಕಲ್ಕತ್ತಾದಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಭಾರತದ ಇತಿಹಾಸ ಮತ್ತು ರಾಜಕಾರಣದ ಬಗ್ಗೆ ತಮ್ಮದೇ ಒಳನೋಟಗಳುಳ್ಳ ಭಾಷಣಗಳನ್ನು ಮಾಡಿ ಅಧ್ಯಾಪಕ-ವಿದ್ಯಾರ್ಥಿಗಳೆನ್ನದೆ, ಎಲ್ಲರ ಮೆಚ್ಚುಗೆಯ ವಿದ್ಯಾರ್ಥಿ ನಾಯಕರಾದವರು. ೧೯೨೮ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ತಮ್ಮ ಪ್ರತಿಭೆ ಮತ್ತು ಸಂಘಟನಾ ಚಾತುರ್ಯದಿಂದ ಜವಾಹರಲಾಲ್ ನೆಹರೂ ಮತ್ತು ಸುಭಾಷ್ ಚಂದ್ರಬೋಸರ ಗಮನ ಸೆಳೆದವರು.

ಜರ್ಮನಿಯಿಂದ ಡಾಕ್ಟೋರೇಟ್

ಲೋಹಿಯಾ ಉನ್ನತ ವಿದ್ಯಾಭ್ಯಾಸಕ್ಕಾಗಿ ಜರ್ಮನಿಗೆ ಹೋದಾಗಲೂ ಅಲ್ಲಿ ಭಾರತೀಯ ವಿದ್ಯಾರ್ಥಿ ಸಂಘದಲ್ಲಿ ಸಕ್ರಿಯರಾಗಿದ್ದವರು. ೧೯೩೧ರಲ್ಲಿ ಜಿನೀವಾದಲ್ಲಿ ನಡೆದ ಲೀಗ್ ಆಫ್ ನೇಷನ್ಸ್ ಸಮಾವೇಶದಲ್ಲಿ ಬಿಕಾನೇರ್‌ನ ಮಹಾರಾಜ ಭಾರತದ ಪ್ರತಿನಿಧಿಯಾಗಿ ಬಂದು ಬ್ರಿಟಿಷ್ ಸರ್ಕಾರದ

ಕಾರ್ಯಶೈಲಿಯನ್ನು ಹೊಗಳತೊಡಗಿದಾಗ ಪ್ರೇಕ್ಷಕರಾಗಿದ್ದ ಲೋಹಿಯಾ ಎದ್ದು ನಿಂತು ಸಿಳ್ಳೆ ಹೊಡೆದು ತಮ್ಮ ಪ್ರತಿಭಟನೆ ಸೂಚಿಸಿದರು! ಆ ಮೂಲಕ ಮೊದಲ ಬಾರಿಗೆ ಅವರು ಭಾರತದಾದ್ಯಂತ ಸುದ್ದಿಯಾದರು. ಜರ್ಮನಿಯಲ್ಲಿದ್ದ ಮೂರು ವರ್ಷಗಳ ಕಾಲ ಹಿಟ್ಲರನ ರಾಜಕೀಯ ಉನ್ನತಿಗೆ ಕಾರಣವಾದ ಐರೋಪ್ಯ ರಾಜಕಾರಣವನ್ನು ಅವರು ಹತ್ತಿರದಿಂದ ಗಮನಿಸಿದ್ದರು. ಆ ಸಂದರ್ಭದಲ್ಲಿಯೇ ಬಹುಶಃ ಅವರು ಕಮ್ಯೂನಿಸಂ ಮತ್ತು ಫ್ಯಾಸಿಸಂಗಳ ನಡುವಣ ಆಯ್ಕೆಯಾಗಿ ಪ್ರಜಾಸತ್ತಾತ್ಮಕ ಸಮಾಜವಾದದ ಬಗೆಗೆ ಸಹಾನುಭೂತಿ ಬೆಳೆಸಿಕೊಂಡರು. ಈ ಮಧ್ಯೆ ಖ್ಯಾತ ಅರ್ಥಶಾಸ್ತ್ರಜ್ಞ ಷೂಮೇಕರ್ ಅವರ ಸಹೋದ್ಯೋಗಿಯಾಗಿದ್ದ ಪ್ರೊ॥ ಜೆಂಬಾರ್ಟ್‌ರ ಮಾರ್ಗದರ್ಶನದಲ್ಲಿ ಅವರು 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ವಿಷಯದ ಮೇಲೆ ಪ್ರೌಢ ಪ್ರಬಂಧ ಬರೆದು ಬರ್ಲಿನ್ ವಿಶ್ವವಿದ್ಯಾಲಯದಿಂದ ಇತಿಹಾಸ ಮತ್ತು ರಾಜಕೀಯಶಾಸ್ತ್ರಗಳೆರಡರಲ್ಲೂ ಡಾಕ್ಟರೇಟ್ ಪದವಿ ಪಡೆದರು.

ಕಾಂಗ್ರೆಸ್ ರಾಜಕಾರಣದ ಮಧ್ಯೆ

ತಮ್ಮ ೨೨ನೇ ವಯಸ್ಸಿನಲ್ಲಿ ೧೯೩೨ರಲ್ಲಿ ಲೋಹಿಯಾ ಭಾರತಕ್ಕೆ ಮರಳಿದಾಗ, ಸ್ವಾತಂತ್ರ್ಯ 'ಹೋರಾಟ' ಸ್ಥಗಿತಗೊಂಡಿತ್ತು. ಗಾಂಧೀಜಿ ಅವರ ಖಾದಿ-ಗ್ರಾಮೋದ್ಯೋಗ, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ ಮುಂತಾದ ರಚನಾತ್ಮಕ ಕಾರ್ಯಕ್ರಮಗಳ ಆಂದೋಲನ ನಡೆದಿತ್ತು. ಇದರಿಂದ ಬೇಸತ್ತಿದ್ದ ಕಾಂಗ್ರೆಸ್ಸಿನ ಯುವಜನರ ಗುಂಪೊಂದು ರಷ್ಯಾದ ಕ್ರಾಂತಿಯಿಂದ ಪ್ರೇರಣೆ ಪಡೆದು, ಮಾರ್ಕ್ಸ್‌ವಾದದ ಸ್ಫೂರ್ತಿಯಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪಿಸಿಕೊಳ್ಳುವ ಹವಣಿಕೆಯಲ್ಲಿತ್ತು. ಲೋಹಿಯಾ ಆ ಗುಂಪು ಸೇರಿದರು. ಆ ಗುಂಪಿನ ಮುಖವಾಣಿ

'ಕಾಂಗ್ರೆಸ್ ಸೋಶಲಿಸ್ಟ್' ಪತ್ರಿಕೆಯ ಸಂಪಾದಕರಾದರು. ಈ ಪತ್ರಿಕೆಯಲ್ಲಿನ ತಮ್ಮ ಲೇಖನಗಳಿಂದ ಗಾಂಧೀಜಿಯ ಗಮನ ಸೆಳೆದ ಲೋಹಿಯಾ; ಅವರೊಂದಿಗೆ ನಿರಂತರ ಸಂವಾದದಲ್ಲಿದ್ದು, ಗಾಂಧೀವಾದದಿಂದ ಸಮಾಜವಾದ ಪಡೆಯಬಹುದಾದದ್ದೇನು ಎಂಬುದರ ಪರಿಶೀಲನೆ ಮಾಡಿದರು. ಜೊತೆಗೆ ನೆಹರೂ ಅವರ ಪ್ರೋತ್ಸಾಹದಿಂದ ಕಾಂಗ್ರೆಸ್ ಪಕ್ಷದ ವಿದೇಶ ವ್ಯವಹಾರ ವಿಭಾಗದ ಕಾರ್ಯದರ್ಶಿಯಾಗಿ, ಅಂತಾರಾಷ್ಟ್ರೀಯ ರಾಜಕಾರಣಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆದರೆ ಪೂರ್ಣ ಸ್ವಾತಂತ್ರ್ಯ ಪಡೆಯುವ ಮುನ್ನವೇ, ಅವಕಾಶ ಸಿಕ್ಕಾಗಲೆಲ್ಲ ಕಾಂಗ್ರೆಸ್ ಪ್ರಕಟಿಸುತ್ತಿದ್ದ ಅಧಿಕಾರ ದಾಹದಿಂದ ಅಸಹ್ಯಪಟ್ಟುಕೊಂಡು ಅವರು ಕಾಂಗ್ರೆಸ್ಸಿನ ಅಧಿಕಾರ ಸ್ಥಾನಗಳಿಂದ ದೂರ ಉಳಿದರು. ಎರಡನೇ ಮಹಾಯುದ್ಧ ಆರಂಭವಾದಾಗ ಅದರ ಹಿಂದಿನ ಜಾಗತಿಕ ರಾಜಕಾರಣದ ಶೋಷಣೆಯ ನೆಲೆಗಳನ್ನು ಗುರುತಿಸಿ ಅವರು ಯುದ್ಧ ವಿರೋಧಿ ಬರಹಗಳನ್ನು ಬರೆದರು. ಯುದ್ಧ ವಿರೋಧಿ ಭಾಷಣಗಳನ್ನು ಮಾಡಿ ಬಂಧನಕ್ಕೊಳಗಾದರು. ಗಾಂಧೀಜಿ ಈ ಬರಹ-ಭಾಷಣಗಳನ್ನು ಮೆಚ್ಚಿ ಅವನ್ನು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಿದರು. ಅವರು ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿ ಸಂದರ್ಭದಲ್ಲಿ ಭೂಗತರಾಗಿ ಬ್ರಿಟಿಷ್ ಸರ್ಕಾರದ ವಿರುದ್ಧ ಬುಡಮೇಲು ಕೃತ್ಯಗಳಲ್ಲಿ ತೊಡಗಿದ್ದರ ಪರಿಣಾಮವಾಗಿ ಲಾಹೋರ್ ಕೋಟ್ ಸೆರೆಮನೆಯಲ್ಲಿ ಚಿತ್ರಹಿಂಸೆ ಅನುಭವಿಸಿದರು.

ಗಾಂಧೀಜಿಗೆ ಹೆಗಲು

೧೯೪೬ರಲ್ಲಿ ಸೆರೆಮನೆಯಿಂದ ಬಿಡುಗಡೆಯಾದ ನಂತರದಲ್ಲೇ ಲೋಹಿಯಾ ಪೋರ್ಚುಗೀಸರ ಆಡಳಿತದಲ್ಲಿ

ಉಸಿರುಗಟ್ಟಿಹೋಗಿದ್ದ ಗೋವಾದ ಜನತೆಯ ಕರೆಯ ಮೇರೆಗೆ ಅಲ್ಲಿಗೆ ಹೋಗಿ, ಅಲ್ಲಿಯೂ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹತ್ತಿಸಿದರು. ಇತರ ಸಮಾಜವಾದಿಗಳೊಂದಿಗೆ ದೇಶವಿಭಜನೆಯ ಕಾರಸ್ಥಾನವನ್ನು ವಿರೋಧಿಸಿ ಗಾಂಧೀಜಿಯೊಂದಿಗೆ ನಿಂತರು. ಈ ದೇಶವಿಭಜನೆಯ ಫಲವಾಗಿ ಹುಟ್ಟಿದ ಕೋಮು ಹಿಂಸೆಯ ಸಂದರ್ಭದಲ್ಲಿ ಗಾಂಧೀಜಿಯ ಸೂಚನೆಯಂತೆ ಅವರೊಂದಿಗಿದ್ದು ಕಲ್ಕತ್ತಾದಿಂದ ದೆಹಲಿವರೆಗೆ ಕೋಮುಸೌಹಾರ್ದದ ಕೆಲಸಗಳಲ್ಲಿ ತೊಡಗಿದರು. ತಮ್ಮ ಕೊನೆಯ ದಿನಗಳಲ್ಲಿ ನೆಹರೂ ನೇತೃತ್ವದ ಕಾಂಗ್ರೆಸ್ ಆಡಳಿತದಿಂದ ಭ್ರಮನಿರಸನಗೊಂಡು ಭರವಸೆಗಾಗಿ ಸಮಾಜವಾದಿಗಳತ್ತ ನೋಡತೊಡಗಿದ್ದ ಗಾಂಧೀಜಿಗೆ, ಅವರು ಕೊಲೆಯಾದ ಎರಡು ದಿನಗಳ ಮುಂಚಿನವರೆಗೂ ಬಿರ್ಲಾ ಭವನದ ಆವರಣದಲ್ಲಿ ಲೋಹಿಯಾ ತಮ್ಮ ಕಿವಿ, ಮನಸ್ಸು ಮತ್ತು ಹೆಗಲು ನೀಡಿದ್ದರು. ಅವರಿಗಾಗಿ ತಮ್ಮ ಪ್ರಿಯ ಸಿಗರೇಟ್ ಬಿಟ್ಟಿದ್ದರು. ಆದರೆ ಗಾಂಧೀಜಿಯ ಪಾರ್ಥಿವ ಶರೀರ ನೋಡಿ 'ನಮ್ಮನ್ನೇಕೆ ಹೀಗೆ ನಡುನೀರಿನಲ್ಲಿ ಕೈಬಿಟ್ಟು ಹೋದಿರಿ!' ಎಂದು ರೋದಿಸಿದರು.

ಗಾಂಧೀಜಿಯ ಶವಯಾತ್ರೆಯಲ್ಲಿ ನೆಹರೂ ಮತ್ತು ಪಟೇಲ್ ಪಾದರಕ್ಷೆಗಳೊಂದಿಗೆ ಶವ-ವಾಹನವನ್ನೇರಿ ನಿಂತಾಗ ಲೋಹಿಯಾ ವಿಷಣ್ಣರಾದರು. ಗಾಂಧೀಜಿಯ ಚಿತಾಭಸ್ಮವನ್ನು ಹೊತ್ತು ತ್ರಿವೇಣಿ ಸಂಗಮದೆಡೆಗೆ ಧಾವಿಸುತ್ತಿದ್ದ ರೈಲುಗಾಡಿಗೆ ಹಾದಿಬದಿಯ ಹೊಲಗದ್ದೆಗಳಲ್ಲಿದ್ದ ರೈತರು, ಜನಸಾಮಾನ್ಯರು ಹೂ ಎರಚಿ ಕೈಮುಗಿಯುತ್ತಿದ್ದುದನ್ನು ನೋಡಿ, ಗಾಂಧೀಜಿಯನ್ನು ನಾಯಕರು ಕೈಬಿಟ್ಟಿದ್ದರೂ ಜನಸಾಮಾನ್ಯರು ತಮ್ಮ ಹೃದಯಲ್ಲಿ ನೆಲೆ ಮಾಡಿಕೊಂಡಿದ್ದಾರೆ ಎಂಬುದನ್ನು ಗಮನಿಸಿದರು. ಅದರ ಆಧಾರದ ಮೇಲೆ ಲೋಹಿಯಾ ತಮ್ಮ ಮುಂದಿನ

ರಾಜಕಾರಣವನ್ನು ಕಲ್ಪಿಸಿಕೊಂಡರು. ಮುಂದೆ ತಮ್ಮ ಪಕ್ಷದವರೇ ಅಲ್ಪಕಾಲಿಕ ಅಧಿಕಾರದ ಅಮಲಿನಲ್ಲಿ ಇದಕ್ಕೆ ಅಡ್ಡಿ ಬಂದು ತಮ್ಮ ಮೇಲೇ ಅಶಿಸ್ತಿನ ಆರೋಪ ಹೊರಿಸಿದಾಗ, ಅವರು ತಾತ್ವಿಕ ದೃಢನಿಷ್ಠೆಯಿಂದ ತಮ್ಮದೇ ಪಕ್ಷ ಕಟ್ಟಿಕೊಂಡರು. ಭಾರತೀಯ ಸಮಾಜವಾದಿ ತತ್ವಮೀಮಾಂಸೆಗೆ ಮತ್ತು ಹೋರಾಟಕ್ಕೆ ತಮ್ಮದೇ ವಿಶಿಷ್ಟ ಕೊಡುಗೆ ನೀಡಿದರು.

–೫–

ಮಾರ್ಕ್ಸ್‌ವಾದದ ತೀಕ್ಷ್ಣ ಪರಿಶೀಲನೆ

ಇತಿಹಾಸ ಮತ್ತು ತತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದ ಲೋಹಿಯಾ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಈ ಕ್ಷೇತ್ರಗಳ ಪರಿಣಿತರ ಎಲ್ಲ ಪುಸ್ತಕಗಳನ್ನೂ ಓದಿದ್ದರು. ಅವರು ತಂದೆಯಿಂದ ಪಡೆಯುತ್ತಿದ್ದ ಹಣದ ಬಹುಭಾಗವನ್ನು ಖರ್ಚು ಮಾಡುತ್ತಿದ್ದುದು ಪುಸ್ತಕಗಳ ಮೇಲೇ. ಜರ್ಮನಿಯಲ್ಲಿ ಸಂಶೋಧನೆಗೆ ತೊಡಗಿದ ಸಂದರ್ಭದಲ್ಲಿ ಅವರು ಮಾರ್ಕ್ಸ್ ಮತ್ತು ಹೆಗೆಲ್‌ರ ವಿಚಾರಗಳನ್ನು ಮೂಲ ಜರ್ಮನ್‌ನಲ್ಲೇ ಓದಿಕೊಂಡಿದ್ದರು. ಈ ಎಲ್ಲ ಓದಿನ ಹಿನ್ನೆಲೆಯಲ್ಲಿ ಅವರು ಜರ್ಮನಿಯ ರಾಜಕೀಯ ವೇದಿಕೆಯಲ್ಲಿ ನಡೆದಿದ್ದ ಬಂಡವಾಳ ವಾದ–ಕಮ್ಯೂನಿಸಂ–ಸಮಾಜವಾದ–ಫ್ಯಾಸಿಸಂಗಳ ನಡುವಣ ಅಂತರ್ಸಂಬಂಧಗಳನ್ನು, ಘರ್ಷಣೆಗಳನ್ನು ಅರ್ಥ ಮಾಡಿ ಕೊಳ್ಳಲು ಯತ್ನಿಸಿದರು. ಆ ಕಾಲದ ಬಹುಪಾಲು ಎಲ್ಲ ಬುದ್ಧಿಶಾಲಿ ತರುಣರಂತೆ ಅವರೂ ಮಾರ್ಕ್ಸ್‌ವಾದದಿಂದ ಆಕರ್ಷಿತರಾಗಿದ್ದರು. ರಷ್ಯಾದ ಅಕ್ಟೋಬರ್ ಕ್ರಾಂತಿ ಅವರಲ್ಲಿ ಹುಮ್ಮಸ್ಸು ತುಂಬಿತ್ತು. ಆದರೆ ಕಮ್ಯೂನಿಸ್ಟರು ಜರ್ಮನಿಯಲ್ಲಿ ಆಡಿದ ರಾಜಕೀಯ ನಾಟಕದಿಂದಾಗಿ ಹಿಟ್ಲರ್ ಮೇಲೇರಿದುದನ್ನು

ಅವರು ಕಣ್ಣಾರೆ ಕಂಡು ವಿಚಲಿತರಾಗಿದ್ದರು. ನಂತರ ಭಾರತದಲ್ಲಿ ತಾತ್ವಿಕ ಸ್ನೇಹದ ಹೆಸರಲ್ಲಿ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಹೊಕ್ಕು ಅದನ್ನು ನಾಶಗೈಯಲು ಮಾಡಿದ ಪ್ರಯತ್ನಗಳನ್ನೂ ಮತ್ತು 'ಭಾರತ ಬಿಟ್ಟು ತೊಲಗಿ' ಚಳುವಳಿ ಸಂದರ್ಭದಲ್ಲಿ ಅವರು ಬ್ರಿಟಿಷ್ ಸರ್ಕಾರದ ಏಜೆಂಟರಂತೆ ವರ್ತಿಸಿದುದನ್ನು ಗಮನಿಸಿದ್ದ ಲೋಹಿಯಾ, ಮಾರ್ಕ್ಸ್‌ವಾದ ಒಂದು ರಾಜಕೀಯ ಕಾರ್ಯಕ್ರಮವಾಗಿ ತನ್ನದೇ ಆದ ನೈತಿಕತೆಯನ್ನು ಹೊಂದಿಲ್ಲ ಎಂಬುದನ್ನು ಮನಗಂಡರು. ಹಾಗೇ ರಷ್ಯಾದ ಕ್ರಾಂತಿ, ಸ್ಟಾಲಿನ್ ಆಳ್ವಿಕೆಯ ಸಂದರ್ಭದಲ್ಲಿ ರಾಕ್ಷಸೀಯ ಮಟ್ಟವನ್ನು ಮುಟ್ಟಿರುವುದು ಅವರು ಮಾರ್ಕ್ಸ್‌ವಾದವನ್ನು ತೀಕ್ಷ್ಣ ಪರಿಶೀಲನೆಗೆ ಒಳಪಡಿಸಲು ಪ್ರೇರೇಪಿಸಿತು.

ಬಂಡವಾಳಶಾಹಿ –ಸಾಮ್ರಾಜ್ಯಶಾಹಿಗಳ ಅವಳಿ ಹುಟ್ಟಿನ ಸಿದ್ಧಾಂತ

ಈ ತೀಕ್ಷ್ಣ ಪರಿಶೀಲನೆಯಿಂದ ಅವರು ಕಂಡುಕೊಂಡಿದ್ದೆಂದರೆ, ಕಮ್ಯೂನಿಸಂ ಜ್ಞಾನಶ್ರೇಷ್ಠತೆಯಿಂದ ನರಳುವ ಮತಾಂತರವಾದಿ ಕ್ರಿಶ್ಚಿಯನ್ ಧರ್ಮದ ನಂತರ ಈರೋಪ್ ಏಷ್ಯಾದ ಮೇಲೆ ಪ್ರಯೋಗಿಸಿರುವ ಇತ್ತೀಚಿನ ಅಸ್ತ್ರ ಎಂಬುದನ್ನು. ಅಂದರೆ, ಅದೊಂದು ಐರೋಪ್ಯ ಆಧುನಿಕ ದೃಷ್ಟಿಯ ಉತ್ಪನ್ನ ಎಂಬುದನ್ನು. ಬಂಡವಾಳವಾದ ಆರಂಭ ಘಟ್ಟದಲ್ಲಿ ಪ್ರಗತಿಪರವಾಗಿತ್ತು ಎಂಬ ಅದರ ವಾದವೇ ಅದು ಐರೋಪ್ಯ ಆಧುನಿಕ ದೃಷ್ಟಿಯ ಸಂಕುಚಿತತೆಯಿಂದ ಹುಟ್ಟಿದುದು ಎಂಬುದನ್ನು ಸೂಚಿಸುತ್ತದೆ. ಏಕೆಂದರೆ, ಯೂರೋಪ್‌ನಲ್ಲಿ ಹುಟ್ಟಿದ ಈ ಬಂಡವಾಳವಾದದ 'ಪ್ರಗತಿಪರತೆ', ವಸಾಹತುಶಾಹಿಯನ್ನು ಸೃಷ್ಟಿಸಿ ಜಗತ್ತಿನ ಅರ್ಧ ಭಾಗವನ್ನು ಲೂಟಿ ಮಾಡಿತು. ಈ ಲೂಟಿಯ ಫಲಗಳೇ ಐರೋಪ್ಯ ದೇಶಗಳಲ್ಲಿ ಬೃಹತ್ ಯಂತ್ರಗಳಾಗಿ, ಬಂಡವಾಳವಾದವನ್ನು ಬೆಳೆಸಿದ್ದು; ಜಗತ್ತಿನ ಆ

ಅರ್ಧಭಾಗದಲ್ಲಿ ಸಮೃದ್ಧಿಯನ್ನು ಸೃಷ್ಟಿ ಮಾಡಿ, ಇನ್ನರ್ಧ ಭಾಗದಲ್ಲಿ ದಾರಿದ್ರ್ಯವನ್ನು ಸೃಷ್ಟಿಸಿದುದು. ಹಾಗಾಗಿ ಈ ಪ್ರಕ್ರಿಯೆಯಲ್ಲಿ ಯೂರೋಪಿನ ಬಂಡವಾಳಶಾಹಿಗಳದಷ್ಟೇ ಅಲ್ಲ, ಕಾರ್ಮಿಕಶಾಹಿಯ ಪಾಲೂ ಇದೆ. ಹೀಗಾಗಿ ಜಗತ್ತೇ ಒಂದು ಸಮರೂಪಿ ಆರ್ಥಿಕತೆ ಎಂಬಂತೆ ಜಗತ್ತಿನ ಕಾರ್ಮಿಕರೇ ಒಂದಾಗಿ ಎಂದು ಕರೆ ಕೊಡುವುದೂ, ಜಾಗತಿಕ ನೆಲೆಯ ವರ್ಗ ಹೋರಾಟವನ್ನು ಪ್ರತಿಪಾದಿಸುವುದೂ ಅಸಂಗತ ಎಂದು ಲೋಹಿಯಾ ಸೂಚಿಸಿದರು. ಇದು ಮಾರ್ಕ್ಸ್‌ವಾದದ ವಿಸ್ತರಣೆಯಾಗಿ ಲೆನಿನ್ ಪ್ರತಿಪಾದಿಸಿದ್ದ 'ವಸಾಹತುಶಾಹಿಯು ಬಂಡವಾಳವಾದದ ಅಂತಿಮ ಘಟ್ಟ' ಎಂಬ ಪ್ರಮೇಯಕ್ಕೆ ವಿರುದ್ಧವಾಗಿ ಲೋಹಿಯಾ ಮಂಡಿಸಿದ 'ಬಂಡವಾಳಶಾಹಿ ಮತ್ತು ವಸಾಹತುಶಾಹಿಗಳ ಅವಳಿ ಹುಟ್ಟಿನ ಸಿದ್ಧಾಂತ' ಎಂದೇ ಪ್ರಸಿದ್ಧವಾಗಿದೆ.

ಮಾರ್ಕ್ಸ್‌ವಾದದ ಈ ಲೋಪದ ಹಿಂದೆ ಬದುಕನ್ನು ವಸ್ತು ಮತ್ತು ಚೈತನ್ಯ ಅಥವಾ ಭೌತ ಮತ್ತು ಅಭೌತ ಎಂದು ವಿಭಾಗಿಸಿ ನೋಡುವ ಈರೋಪಿನ 'ಜ್ಞಾನಯುಗ'ದ ಮೂಸೆಯಲ್ಲಿ ಹುಟ್ಟಿದ ಪರಿಷ್ಕೃತ ಕ್ರಿಶ್ಚಿಯನ್ ನೋಟವಿದೆ. ಹಾಗಾಗಿಯೇ ಮೊದಲು ಹೆಗಲ್ ಮತ್ತು ಅನಂತರ ಮಾರ್ಕ್ಸ್ ಜಗತ್ತಿನ ಇತಿಹಾಸವನ್ನು ನಿರೂಪಿಸಲು ಭೌತ–ಅಭೌತ ಅಂದರೆ ಪ್ರಜ್ಞೆ–ಪರಿಸರಗಳ ದ್ವಂದ್ವಾತ್ಮಕ ತರ್ಕವನ್ನು ಬಳಸಿದರು. ಮಾರ್ಕ್ಸ್‌ವಾದವು ಭೌತ ಅಂದರೆ ಸಮಾಜದ ಆರ್ಥಿಕ ಚಟುವಟಿಕೆಗಳು ಅದರ ಧರ್ಮ–ಸಂಸ್ಕೃತಿಗಳ ಸ್ವರೂಪವನ್ನು ನಿರ್ಧರಿಸುತ್ತವೆಂದು ಮತ್ತು ಈ ಕ್ರಿಯೆ–ಪ್ರತಿಕ್ರಿಯೆಗಳ ಸರಪಳಿಯೇ ಇತಿಹಾಸವನ್ನು ನಿರ್ಮಿಸುತ್ತಾ ಹೋಗುವುದೆಂದು ಪ್ರತಿಪಾದಿಸುತ್ತಾದ್ದರಿಂದ, ಅದನ್ನು ದ್ವಂದ್ವಾತ್ಮಕ ಭೌತವೆಂದು ಕರೆಯಲಾಗುವುದು. ಆದರೆ ಲೋಹಿಯಾ, ಇತಿಹಾಸದ ಈ ಭೌತವಾದಿ ನಿರೂಪಣೆಯನ್ನು ಅಲ್ಲಗಳೆದರು. ಈ

ಭೌತ-ಅಭೌತ ವಿಭಜನೆಯನ್ನು ಒಡಕಿನ ದೃಷ್ಟಿ ಎಂದು ಕರೆದರು. ಬದುಕು ಅಖಂಡವಾಗಿದ್ದು, ಭೌತ ಅಭೌತಗಳೆಂಬುವು ಒಂದೇ ವಿದ್ಯಮಾನದ ಎರಡು ನೋಟಗಳಷ್ಟೇ ಎಂದು ಗುರುತಿಸಿದರು. ತಮಗೆ ಭೌತವಾದಿಗಳೊಡನೆ ಇದ್ದಾಗಲೆಲ್ಲ ಅಧ್ಯಾತ್ಮವಾದಿಗಳೆಡೆಗೆ ಹೋಗಬೇಕೆನಿಸುತ್ತದೆಯೆಂದೂ ಅಧ್ಯಾತ್ಮವಾದಿಗಳೊಡನಿದ್ದಾಗ ಭೌತವಾದಿಗಳತ್ತ ಹೋಗಬೇಕೆನಿಸುತ್ತದೆಯೆಂದೂ ಲೋಹಿಯಾ ಹೇಳುತ್ತಿದ್ದರು!

ನಾಗರೀಕತೆಯ ಏಳು ಬೀಳುಗಳು

ಹೀಗಾಗಿ ಇತಿಹಾಸಕ್ಕೆ ಒಂದು ತರ್ಕವಿದೆ ಎಂಬುದನ್ನೂ ಮತ್ತು ಇತಿಹಾಸವನ್ನು ಮಾರ್ಕ್ಸ್ ವಿಂಗಡಿಸಿದ ಹಾಗೆ ಆದಿಮ ಸಮಾಜವಾದಿ, ಗುಲಾಮಿ, ಊಳಿಗಮಾನ್ಯಶಾಹಿ, ಬಂಡವಾಳ ಶಾಹಿ ಇತ್ಯಾದಿಯಾಗಿ ಗೆರೆ ಕೊರೆದಂತೆ ವಿವಿಧ ಘಟ್ಟಗಳಾಗಿ ವಿಂಗಡಿಸುವುದನ್ನು ಅವರು ಪ್ರಶ್ನಿಸಿದರು. ಇತಿಹಾಸ ಒಂದು ಘಟ್ಟದ ನಂತರ ಇನ್ನೊಂದು ಘಟ್ಟವೆಂಬಂತೆ ರೇಖಾತ್ಮಕವಾಗಿ ಚಲಿಸಿಲ್ಲ ಎಂಬುದಕ್ಕೆ ಅನೇಕ ಸಾಕ್ಷ್ಯಗಳನ್ನು ಅವರು ನೀಡಿದರು. ಜಗತ್ತಿನ ಇತಿಹಾಸದಲ್ಲಿನ ನಾಗರಿಕತೆಗಳ ಏಳುಬೀಳುಗಳನ್ನು ಈ ವರ್ಗ ಹೋರಾಟದ ನಿರೂಪಣೆ ವಿವರಿಸಲಾರದು ಎಂದು ಅವರು ವಾದಿಸಿದರು. ಇತಿಹಾಸ ಇಷ್ಟು ನಿಯಮಬದ್ಧವಾಗಿ ಹಾಗೂ ಸರಳರೇಖಾತ್ಮಕವಾಗಿ ಚಲಿಸುವಂತಿದ್ದರೆ, ಒಂದು ಕಾಲದಲ್ಲಿ ನಾಗರಿಕತೆ ತುಟ್ಟತುದಿಯಲ್ಲಿತ್ತೆಂದು ಹೇಳಲಾದ ಭಾರತ ಇಂದೇಕೆ ಪಾತಾಳ ತಲುಪಿದೆ? ಎಂದು ಪ್ರಶ್ನಿಸಿದರು. ಇತಿಹಾಸ ದಲ್ಲಿ ಮನುಷ್ಯನ ಇಚ್ಛಾಶಕ್ತಿಯೂ, ಘಟನಾವಳಿಗಳೂ ಚಾಲಕಶಕ್ತಿ ಯಾಗಿ ಕೆಲಸಮಾಡಬಲ್ಲವೆಂದು ಅವರು ಪ್ರತಿಪಾದಿಸಿದರು.

ಜಾತಿ ಮತ್ತು ವರ್ಗ

ಇತಿಹಾಸದ ದ್ವಂದ್ವಾತ್ಮಕ ಭೌತವಾದಿ ನಿರೂಪಣೆಗೆ

ಎದುರಾಗಿ ಲೋಹಿಯಾ ನಾಗರಿಕತೆಯ ಏಳುಬೀಳುಗಳ ಪರಿಭಾಷೆಯಲ್ಲಿ ಇತಿಹಾಸವನ್ನು ವಿವರಿಸಲು ಯತ್ನಿಸಿದರು. ಇತಿಹಾಸದಲ್ಲಿ ನಾಗರಿಕತೆಯ ಏಳುಬೀಳುಗಳೊಂದಿಗೆ ಅಧಿಕಾರ ಮತ್ತು ಸಮೃದ್ಧಿಗಳು ಒಂದು ಭೂಖಂಡದಿಂದ ಇನ್ನೊಂದು ಭೂಖಂಡಕ್ಕೆ ಪಲ್ಲಟವಾಗಿವೆ. ಈ ಪಲ್ಲಟಗಳು ಆಯಾ ನಾಗರಿಕತೆಗಳ ಸಮಾಜದೊಳಗೆ ವರ್ಗ ಮತ್ತು ಜಾತಿಗಳ ಹುಟ್ಟಿಗೆ ಕಾರಣವಾಗಿವೆ ಎಂದು ಅವರು ಪ್ರತಿಪಾದಿಸಿದರು. ಅಂದರೆ ಒಂದು ನಾಗರಿಕತೆಯ ಬೆಳವಣಿಗೆ, ಅದಕ್ಕೆ ಕಾರಣವಾದ ಅದರ ಸಾಮರ್ಥ್ಯ ಮತ್ತು ಅದರಲ್ಲಿ ಅದು ಗಳಿಸಿಕೊಂಡ ದಕ್ಷತೆ ಗರಿಷ್ಠ ಮಟ್ಟ ಮುಟ್ಟಿ ಸ್ಥಗಿತಗೊಂಡಾಗ, ಇನ್ನೊಂದು ನಾಗರಿಕತೆಯ ಆಕ್ರಮಣವನ್ನು ಆಹ್ವಾನಿಸುತ್ತದೆ. ಆಗ ಆ ನಾಗರಿಕತೆಯೊಳಗಿನ ಸಮಾಜ ತನ್ನ ಬೆಳವಣಿಗೆ ಅಥವಾ ಏಳಿಗೆಯ ಸಮಯದಲ್ಲಿ ಚುರುಕಾಗಿ ಚಲನಶೀಲ ವರ್ಗ ಸಮಾಜವಾಗಿದ್ದುದು, ಹೊರ ಆಕ್ರಮಣದ ಹಿನ್ನೆಲೆಯಲ್ಲಿ ಅದನ್ನು ಎದುರಿಸಲು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸನ್ನದ್ಧವಾಗಬೇಕಾಗುತ್ತದೆ. ತಾತ್ಕಾಲಿಕವಾಗಿಯಾದರೂ ಅದು ಒಂದು ಸ್ಥಿರ ಸಮಾಜವನ್ನು ಖಚಿತಗೊಳಿಸಕೊಳ್ಳಬೇಕಾಗುತ್ತದೆ. ಅಂತಹ ಸ್ಥಿರತೆಗಾಗಿ ಸಮಾಜ ವರ್ಗಗಳನ್ನು ಸ್ಥಗಿತಗೊಳಿಸಿಕೊಂಡು, ಸ್ವರಕ್ಷಣೆಗಾಗಿ ಜಾತಿಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಅಂದರೆ ವಿವಿಧ ವರ್ಗಗಳ ನಡುವಣ ಮೇಲಾಟಗಳು ನಿಲ್ಲಿಸಲ್ಪಟ್ಟು, ಅವುಗಳ ಆರ್ಥಿಕ ಚಟುವಟಿಕೆಗಳು ಮತ್ತು ಅವಕ್ಕೆ ಸಂಬಂಧಪಟ್ಟ ಸಾಮಾಜಿಕ ಸ್ಥಾನಮಾನಗಳ ನಿಗದೀಕರಣ ಪ್ರಕ್ರಿಯೆ ಆರಂಭವಾಗುತ್ತದೆ. ಜಾತಿ ಎಂದರೇ ಆರ್ಥಿಕ–ಸಾಮಾಜಿಕ ಸ್ಥಾನಮಾನಗಳ ನಿಗದಿ ಎಂದೇ ಅಲ್ಲವೆ? ಹಾಗಾಗಿ ಲೋಹಿಯಾ ಪ್ರಕಾರ ಜಾತಿ ಎಂದರೆ ಸ್ಥಗಿತಗೊಂಡ ಅಥವಾ ತಣ್ಣಗಾದ ವರ್ಗ; ವರ್ಗ ಎಂದರೆ ಅರಳಿಕೊಂಡ

ಅಂದರೆ ಚಲನಶೀಲವಾದ ಜಾತಿ. ಆದರೆ ಕುಸಿದ ನಾಗರಿಕತೆಯ ಫಲವಾಗಿ ಹುಟ್ಟುವ ಜಾತಿಗಳು ಆ ನಾಗರಿಕತೆ ಕಾಲಕ್ರಮೇಣ ಎದ್ದು ನಿಂತಾಗ ಮತ್ತೆ ವರ್ಗಗಳಾಗಿ ಅರಳಿಕೊಂಡು ಚೈತನ್ಯ ಮತ್ತು ಚಲನಶೀಲತೆ ಪಡೆದುಕೊಳ್ಳುತ್ತವೆ.

ಈ ಜಾತಿ ವ್ಯವಸ್ಥೆಯ ಲಕ್ಷಣಗಳನ್ನು ಭಾರತದಲ್ಲಿ ಮಾತ್ರವಲ್ಲ; ಇತಿಹಾಸದ ಹಲವು ನಾಗರಿಕತೆಗಳಲ್ಲಿ ಕಾಣಬಹುದು ಎನ್ನುತ್ತಾರೆ ಲೋಹಿಯಾ. ಆದರೆ ಇತರೆ ನಾಗರಿಕತೆಗಳಲ್ಲಿ ಈ ಲಕ್ಷಣಗಳು ಆ ನಾಗರಿಕತೆಗಳ ರೂಪಾಂತರ ಮತ್ತು ದಿಶಾಂತರಗಳ ಕಾರಣದಿಂದಾಗಿ ಅಲ್ಪಕಾಲಿಕ ಮಾತ್ರವಾಗಿದ್ದರೆ, ಭಾರತದಲ್ಲಿ ಅದು ಧಾರ್ಮಿಕ ನಂಬಿಕೆಯಾಗಿ ಆಳದ ಪ್ರಜ್ಞೆಗೆ ಸೇರಿಹೋಗಿವೆ. ಇದರಿಂದಾಗಿ ಜಾತಿ ಇಲ್ಲಿ ಒಂದು ವ್ಯವಸ್ಥೆಯಾಗಿ ಹರಳುಗಟ್ಟಿ ಈ ನಾಗರಿಕತೆಯ ರೂಪಾಂತರ ಅಥವಾ ದಿಶಾಂತರಕ್ಕೆ ಕುತ್ತಾಗಿ ಪರಿಣಮಿಸಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಹಾಗಾಗಿ, ಮಾನವ ಇತಿಹಾಸವೆಂದರೆ ಸರಳ ವರ್ಗ ಹೋರಾಟಗಳ ಇತಿಹಾಸವಾಗಿರದೆ, 'ಅಧಿಕಾರ ಮತ್ತು ಸಮೃದ್ಧಿಗಳ ಬಾಹ್ಯಪಲ್ಲಟ ಮತ್ತು ಜಾತಿ ಮತ್ತು ವರ್ಗಗಳ ಆಂತರಿಕ ತುಯ್ದಾಟ'ದ ಇತಿಹಾಸವೆಂದು ಲೋಹಿಯಾ ಬಣ್ಣಿಸುತ್ತಾರೆ. ಇದು ಇತಿಹಾಸದ ಸರಳ ರೇಖಾತ್ಮಕ ಚಲನೆಗೆ ಬದಲಾಗಿ ಚಕ್ರೀಯ ಚಲನೆಯನ್ನು ಸೂಚಿಸುತ್ತದೆ. ಹಿಂದೊಮ್ಮೆ ಈ ಇತಿಹಾಸ ಚಕ್ರದ ಮೇಲ್ಭಾಗ ದಲ್ಲಿದ್ದ ಭಾರತ ಈಗ ಕೆಳಭಾಗಕ್ಕೆ ಕುಸಿದಿದೆ. ಅದರ ಜಾಗಕ್ಕೀಗ ಪಶ್ಚಿಮದ ನಾಗರಿಕತೆ ಮೇಲೇರಿ ಬಂದಿದೆ.

ಗರಿಷ್ಠ ಸಾಮರ್ಥ್ಯ–ಸಂಪೂರ್ಣ ಸಾಮರ್ಥ್ಯ

ಹೀಗೆ ಜನಸಮುದಾಯಗಳ ಏಳುಬೀಳುಗಳಿಗೆ, ಅಂದರೆ ಹಲವು ರೀತಿಯ ಯುದ್ಧ–ಅಶಾಂತಿ–ಸಂಕಷ್ಟಗಳಿಗೆ ಕಾರಣ ವಾಗುವ ಈ ಇತಿಹಾಸ ಚಕ್ರದ ಕೀಲು ಮುರಿಯುವ ಸಾಧನವಾಗಿ

ಲೋಹಿಯಾ, ಜಾಗತಿಕ ಸಮಾನತೆಯ ಪರಿಕಲ್ಪನೆಯನ್ನಾಧರಿಸಿದ ಹೊಸ ವಿಶ್ವನಾಗರಿಕತೆಯೊಂದರ ನಿರ್ಮಾಣದ ಅವಶ್ಯಕತೆಯನ್ನು ಪ್ರತಿಪಾದಿಸುತ್ತಾರೆ. ಇದಕ್ಕಾಗಿ ಅವರು ನಾಗಕರಿತೆಯ ಏಳುಬೀಳುಗಳಿಗೆ ಅಂದರೆ ಇತಿಹಾಸ ಚಕ್ರದ ಚಲನೆಗೆ ಕಾರಣವಾಗುವ ನಾಗರಿಕತೆಗಳ ಗರಿಷ್ಠ ದಕ್ಷತೆಗೆ ಬದಲಾಗಿ ಸಂಪೂರ್ಣ ದಕ್ಷತೆ ಪರಿಕಲ್ಪನೆಯನ್ನು ಮುಂದಿಡುತ್ತಾರೆ. ಅಂದರೆ ಅವರು ಮನುಷ್ಯನ ಪ್ರತಿಭೆ-ಕೌಶಲ್ಯಗಳು ಒಂದು ದಿಕ್ಕಿನಲ್ಲಷ್ಟೇ ಪರಿಣತಿಯನ್ನು ಸಾಧಿಸುವ ದಾರಿಯನ್ನು ಬಿಟ್ಟು, ಅವನ ಸರ್ವಾಂಗ ಸುಂದರ ವ್ಯಕ್ತಿತ್ವದ ಸಂಪನ್ನತೆಯನ್ನು ಸಾಧಿಸುವ ಕಡೆ ಹೊಸ ವಿಶ್ವನಾಗರಿಕತೆ ತುಡಿಯಬೇಕು ಎನ್ನುತ್ತಾರೆ. ಇದು ವಿವಿಧ ಜನಾಂಗಗಳ ಸಾಂಸ್ಕೃತಿಕ ಮತ್ತು ದೈಹಿಕ ಸಮೀಪೀಕರಣದಿಂದ ಅಂದರೆ ಇಡೀ ವಿಶ್ವವೇ ಒಂದು ಮಿಶ್ರ ಜನಾಂಗದಿಂದ ತುಂಬುವಂತಾದಾಗ ಸಾಧ್ಯ. ಇದಕ್ಕಾಗಿ ಪರಿಪೂರ್ಣ ವಿಶ್ವೈಕ್ಯತೆಯ ಸಮಾಜವಾದಿ ರಾಜಕೀಯ ತತ್ವವೊಂದರ ಆವಿಷ್ಕಾರವಾಗಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದ ಇಂದು(ಅಂದರೆ ಲೋಹಿಯಾ ಕಾಲದಲ್ಲಿ) ಜಗತ್ತಿನ ಗಮನ ಸೆಳೆದಿರುವ ಬಂಡವಾಳವಾದ ಮತ್ತು ಕಮ್ಯೂನಿಸಂ ಒಂದೇ ನಾಗರಿಕತೆಯ ಎರಡು ಸಂಘರ್ಷಮಯ ಮುಖಗಳಾಗಿದ್ದು, ಅವು ಆತ್ಯಂತಿಕವಾಗಿ ಭೌತಿಕ ಉನ್ನತಿಗೆ ಹಾತೊರೆಯುವ ಒಂದೇ ರೀತಿಯ ಮನುಷ್ಯನನ್ನು ಸೃಷ್ಟಿಸುತ್ತಿದೆ ಎಂದು ಅವರು ಭಾವಿಸುತ್ತಾರೆ. ಹಾಗಾಗಿ ಲೋಹಿಯಾ ಪ್ರಕಾರ ಇಂದಿನ ಜಗತ್ತಿಗೆ ಈ ಎರಡೂ ಸಮಾನ ಅಸಂಬದ್ಧವಾದ ತತ್ವಗಳು.

-೬-

ಆಧುನಿಕ ನಾಗರೀಕತೆಯ ಮಿತಿಗಳು

ಈ ಆಧುನಿಕ ನಾಗರೀಕತೆ ಲೋಹಿಯಾ ಪ್ರಕಾರ ಮತ್ತೆ

ಗರಿಷ್ಠ ದಕ್ಷತೆಯ ನಾಗರಿಕತೆಯೇ. ಇದು ವೈಜ್ಞಾನಿಕ ದಕ್ಷತೆಯ ತುಟ್ಟ ತುದಿಯತ್ತ ಧಾವಿಸುತ್ತಿರುವ ನಾಗರಿಕತೆ. ಆದರೆ, ನಿರಂತರ ವಿಜ್ಞಾನ-ತಂತ್ರಜ್ಞಾನಗಳ ಆವಿಷ್ಕಾರಗಳ ಅನ್ವಯವನ್ನಾಧರಿಸಿದ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಆಶಯದ ಈ ನಾಗರಿಕತೆ ಇಡೀ ಜಗತ್ತಿನಲ್ಲಿ ಹರಡಲಾರದು. ಏಕೆಂದರೆ, ಅದು ಹುಟ್ಟಿನಿಂದಲೇ ಜಗತ್ತಿನ ಒಂದು ಭಾಗವನ್ನು ಸೂರೆ ಮಾಡುತ್ತಾ; ಅಂದರೆ ಅಲ್ಲಿ ಯುದ್ಧಗಳನ್ನೂ, ಅಶಾಂತಿಯನ್ನೂ, ದಾರಿದ್ರ್ಯವನ್ನು ಸೃಷ್ಟಿಸುತ್ತಾ ಮನುಷ್ಯನನ್ನು ಅಧಃಪತನದತ್ತ ತಳ್ಳುತ್ತಾ ಬೆಳೆಯಬಲ್ಲ ನಾಗರಿಕತೆ. ಇದರ ಬಲಿಗಳು ಅತ್ತ ಇರಲಿ, ಇದರ ಲಾಭ ಪಡೆದ ಜಗತ್ತಿನ ಮನುಷ್ಯನೂ ಪದಾರ್ಥ ಪ್ರಪಂಚದ ಪಿಶಾಚಿಯಾಗಿ, ತನ್ನ ಪ್ರಪಂಚದಿಂದಲೇ ಹೊರದೂಡಲ್ಪಡುವ ದುರಂತಕ್ಕೆ ಸಿಕ್ಕಿದ್ದಾನೆ. ಆದರೂ ಆಧುನಿಕ ನಾಗರಿಕತೆಯೆಂದು ಕರೆಯಲ್ಪಡುವ ಇದು, ಒಂದು ಕಡೆ ಸ್ಪರ್ಧೆಯ ಮೂಲಕ ಮತ್ತು ಇನ್ನೊಂದು ಕಡೆದ ದುಡಿಯುವ ವರ್ಗದ ಸರ್ವಾಧಿಕಾರದ ಮೂಲಕ ಮನುಷ್ಯನನ್ನು ಇತಿಹಾಸ ದಲ್ಲಿ ಮೊದಲ ಬಾರಿಗೆ ಸಮಾನತೆಯೆಡೆಗೆ ತುಡಿಯುವಂತೆ ಮಾಡಿದೆ ಎಂದು ಹೇಳಲಾಗುತ್ತಿರುವುದು ಮಾತ್ರ ಎಂತಹ ವಿಪರ್ಯಾಸ!

ಲೋಹಿಯಾ ಆಧುನಿಕ ನಾಗರಿಕತೆಯ ಆಶಯವೆಂದು ಹೇಳಲಾಗುವ ಸಮಾನತೆಯ ಮಿತಿಗಳನ್ನು, ತಾವು ಪ್ರತಿಪಾದಿ ಸುವ ಹೊಸ ವಿಶ್ವನಾಗರಿಕತೆಯ ಆಶಯವಾಗಿ ಸಮಾನತೆಯನ್ನು ನಿರೂಪಿಸುವ ರೀತಿನೀತಿಗಳ ಮೂಲಕ ಎತ್ತಿ ತೋರಿಸುತ್ತಾರೆ. ಅವರ ಪ್ರಕಾರ ಸಮಾನತೆ ಎಂಬುದು ಹೊರಗಿನಿಂದಷ್ಟೇ ಸಾಧಿಸಿ ಕೊಳ್ಳುವಂತಹ ಆದರ್ಶವಲ್ಲ. ಅವರು ಪ್ರತಿಪಾದಿಸುವ ಹೊಸ ಸಮಾಜವಾದಿ ವಿಶ್ವ ನಾಗರಿಕತೆ, ರಾಷ್ಟ್ರ ರಾಷ್ಟ್ರಗಳ ನಡುವಣ

ಸಮಾನತೆಯ ಮೂಲಕ ಸಾಧಿಸಬೇಕಾದ ರಾಷ್ಟ್ರದೊಳಗಿನ ಸಮಾನತೆಯು; ಆತ್ಯಂತಿಕವಾಗಿ ಮನುಷ್ಯನಲ್ಲಿ ಬಾಹ್ಯ ಬಂಧುತ್ವನ್ನೂ ಆಂತರಿಕ ಪ್ರಶಾಂತಿಯನ್ನೂ ಸೃಷ್ಟಿಸುವಂತಹ ಸಂಪೂರ್ಣ ಸಮಾನತೆಯ ಪರಿಕಲ್ಪನೆಯನ್ನು ಆಧರಿಸಿದೆ. ಇದು ಲಾಕಿಕ ಮತ್ತು ಅಧ್ಯಾತ್ಮಿಕವೆಂದು ವಿಂಗಡಿಸಲಾಗದಂತಹ ನಾಲ್ಕು ಆಯಾಮಗಳ ಸಮಾನತೆಯ ಪರಿಕಲ್ಪನೆ ಆಗಿದೆ. ಇದನ್ನು ಸಮಾನತೆಗಿಂತ 'ಸಮತೆ' ಎಂದು ಕರೆಯುವುದೇ ಉಚಿತವೆಂದು ಲೋಹಿಯಾ ಹೇಳುತ್ತಾರೆ. ಸಮತೆ ಎಂದರೆ ಮನುಷ್ಯನನ್ನೂ, ಜಗತ್ತನ್ನೂ ಸಮತೋಲನದಲ್ಲಿಡುವಂತಹ ಸಮಾನತೆ.

ಸರಳ ಸಭ್ಯ ಜೀವನಮಟ್ಟ

ಇಂತಹ ಸಮಾನತೆಯ ಸಾಧನೆಗಾಗಿ ಲೋಹಿಯಾ ಪ್ರತಿಪಾದಿಸಿದ್ದು ಸದಾ ಏರುತ್ತಾ ಹೋಗುವ ಜೀವನ ಮಟ್ಟಕ್ಕೆ ಬದಲಾಗಿ ಒಂದು ಸರಳ ಸಭ್ಯ ಜೀವನ ಮಟ್ಟವನ್ನು ಆಶಯ ವಾಗುಳ್ಳ ಜೀವನ ಕ್ರಮವನ್ನು. ಇದು ಸಾಧ್ಯವಾಗುವುದು ಸರಿ ಸುಮಾರು ಒಂದೇ ಮಟ್ಟದ ಉತ್ಪಾದನಾ ದಕ್ಷತೆ ಸಾಧ್ಯವಾಗು ವಂತಹ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು. ಇದಕ್ಕಾಗಿ ಅವರು ಪ್ರತಿಪಾದಿಸಿದ್ದು, ಅತಿ ವೇಗದಿಂದಾಗಿ ವಿಕ್ಷಿಪ್ತವಾಗುತ್ತಿರುವ ನಾಗರಿಕತೆಯನ್ನು ಸ್ವಲ್ಪ ಸಾವಧಾನಗೊಳಿಸಿ ನೆಮ್ಮದಿಯ ಕಡೆ ಗೊಯ್ಯುವ; ಜಗತ್ತಿನ ಎಲ್ಲಾ ಭಾಗಗಳಲ್ಲಿ ಸಾಧ್ಯವಾಗುವಂತಹ ಸ್ಥಳೀಯ ಬಂಡವಾಳ ಮತ್ತು ಸ್ಥಳೀಯ ಅಗತ್ಯಗಳನ್ನು ಪೂರೈಸ ಬಲ್ಲ ಸಣ್ಣ ಘಟಕಗಳ ನವೀನ ತಂತ್ರಜ್ಞಾನವನ್ನು. ಲೋಹಿಯಾ, ಇಂತಹ ತಂತ್ರಜ್ಞಾನವನ್ನು ಆವಿಷ್ಕರಿಸಿ ಅಳವಡಿಸಿಕೊಳ್ಳುವ ಮೂಲಕ ಅಭಿವೃದ್ಧಿಗೊಂಡವವೆಂದು ಹೇಳಲಾಗುವ ರಾಷ್ಟ್ರಗಳಿಗೆ ಮಾದರಿಯಾಗದೆ, ಬಡದೇಶಗಳಿಗೆ ಮುಕ್ತಿ ಇಲ್ಲ ಎನ್ನುತ್ತಿದ್ದರು. ಆದರೆ ಇದನ್ನು ಗಾಂಧೀಜಿಯ ಚರಕಾಧಾರಿತ ಖಾದಿ ಮತ್ತು

ಗ್ರಾಮೋದ್ಯೋಗಗಳೊಂದಿಗೆ ಗೊಂದಲಿಸಿಕೊಳ್ಳಬಾರದೆಂದು ಅವರು ಎಚ್ಚರಿಸಿದರು. ಬದಲಿಗೆ, ಹೊಸ ತಂತ್ರಜ್ಞಾನ ಎಣ್ಣೆ ಅಥವಾ ವಿದ್ಯುತ್ ಅಥವಾ ಸಾಧ್ಯವಾಗುವಂತಿದ್ದರೆ ಪರಮಾಣು ವಿದ್ಯುತ್‌ನಿಂದ ಚಾಲಿತವಾಗಬಲ್ಲ ಸ್ಥಳೀಯ ನಿರ್ಮಾಣ ಮತ್ತು ನಿರ್ವಹಣೆ ಸಾಧ್ಯವಾಗುವಂತಹ ಸಣ್ಣ ಯಂತ್ರಗಳನ್ನು ವಿನ್ಯಾಸ ಗೊಳಿಸಬೇಕೆಂದು ಅವರು ಸೂಚಿಸಿದರು. ಬಹುಶಃ ಇದರ ಹಿಂದೆ 'ಸಣ್ಣದು ಸುಂದರ' ಖ್ಯಾತಿಯ ಜರ್ಮನಿಯ ಸಮಾಜವಾದಿ ಅರ್ಥಶಾಸ್ತ್ರಜ್ಞ ಷೂಮೇಕರ್‌ನ ಸ್ಫೂರ್ತಿಯು ಇತ್ತು.

ಅಗತ್ಯಗಳಿಗೆ ಒಂದು ಚೌಕಟ್ಟು ಹಾಕುವ ಲೋಹಿಯಾ ಅವರ ಈ ನಾಗರಿಕತೆಯ ಕಲ್ಪನೆಯ ಹಿಂದೆ ಗಾಂಧೀಜಿಯ 'ಸರಳ ಜೀವನ ಉನ್ನತ ಚಿಂತನ'ದ ಸ್ಫೂರ್ತಿಯನ್ನು ಗುರುತಿಸ ಬಹುದು. ಆದರೆ ಲೋಹಿಯಾ ಗಾಂಧೀಜಿಯ ಅಸ್ತೇಯ, ಅರುಚಿ, ಅಪರಿಗ್ರಹ ಇತ್ಯಾದಿಗಳನ್ನೊಳಗೊಂಡ ಅಷ್ಟವ್ರತಗಳ ಅಧ್ಯಾತ್ಮಿಕ ಜೀವನ ಮಾದರಿಯನ್ನು ಒಪ್ಪಿಕೊಳ್ಳಲಿಲ್ಲ. ಬದಲಿಗೆ ಮನುಷ್ಯನಿಗೆ ಸಾಮಾಜಿಕ ಸಭ್ಯತೆಯನ್ನು ಮೀರದ ಸುಖ-ಸವಲತ್ತುಗಳ ಬದುಕನ್ನು ಅವರು ಪ್ರತಿಪಾದಿಸಿದರು. ಈ ವಿಷಯ ದಲ್ಲಿ ಆಧುನಿಕರೇ ಆಗಿದ್ದ ಲೋಹಿಯಾ, ಈ ಆಧುನಿಕತೆ ಅಶ್ಲೀಲವಾಗದಿರಲು ಪ್ರತಿ ಕುಟುಂಬದ ಆದಾಯ ಮತ್ತು ವೆಚ್ಚಗಳ ಮೇಲೆ ಕಾನೂನುಬದ್ಧ ಮಿತಿ ಇರಬೇಕೆಂದು ಸೂಚಿಸಿದರು. ಈ ಮಾತನ್ನು ಹೇಳಿದ ೬೦ರ ದಶಕದಲ್ಲಿ ಅವರು ಈ ಮಿತಿ ತಿಂಗಳಿಗೆ ೧೫೦೦ ರೂಪಾಯಿಗಳಿರಬೇಕೆಂದು ಸಲಹೆ ಮಾಡಿದ್ದರು. ಹಾಗೇ ಸಮಾನತೆಯನ್ನು ಗುರಿಯಾಗುಳ್ಳ ಯಾವುದೇ ಒಂದು ಸಮಾಜ ದಲ್ಲಿ ಅಸಮಾನತೆಯ ಪ್ರಮಾಣ ೧:೧೦ ಅನುಪಾತವನ್ನು ಮೀರದಂತೆ ಆರ್ಥಿಕತೆಯನ್ನು ನಿರ್ವಹಿಸಬೇಕೆಂಬುದು ಅವರ

ಇನ್ನೊಂದು ಸಲಹೆ.

ಸಣ್ಣ ಘಟಕ ತಂತ್ರಜ್ಞಾನ–ಭೂ ಪರಿಮಿತಿ

ಸಣ್ಣ ಘಟಕಗಳ ತಂತ್ರಜ್ಞಾನ ಕೈಗಾರಿಕೀಕೃತ ಆಸ್ತಿಯನ್ನು ಉತ್ಪಾದನೆಯ ಹಂತದಲ್ಲೇ ವಿಕೇಂದ್ರೀಕರಣಕ್ಕೊಳಪಡಿಸುವ ತಂತ್ರವಾದರೆ, ಕೃಷಿ ಆಸ್ತಿಯನ್ನು ಕಟ್ಟುನಿಟ್ಟಾದ ಭೂಸುಧಾರಣಾ ಕ್ರಮಗಳ ಮೂಲಕ ವಿಕೇಂದ್ರೀಕರಣಕ್ಕೊಳಪಡಿಸುವ ಆಶಯ ಅವರದಾಗಿತ್ತು. ಭೂಮಿಯನ್ನು ಐದು ಜನರ ಕುಟುಂಬವೊಂದು ಹೊರಗಿನ ಆಳಿನ ನೆರವಿಲ್ಲದೆ ಬೇಸಾಯ ಮಾಡಬಲ್ಲ ಜಮೀನಿನ ಮೂರರಷ್ಟಕ್ಕೆ ನಿಗದಿ ಮಾಡಬೇಕೆಂಬುದು ಅವರ ಸಲಹೆಯಾಗಿತ್ತು. ಹೆಚ್ಚುವರಿ ಭೂಮಿಯನ್ನು ಆಯಾ ಹಳ್ಳಿಗಳ ಭೂರಹಿತರಿಗೆ ಹಂಚಬೇಕೆಂದೂ ಅವರು ಸೂಚಿಸಿದ್ದರು. ಭಾರತದಲ್ಲಿ ಇರುವ ಬರಡು ಭೂಮಿಯನ್ನು ಹಸನುಗೊಳಿಸಿ ಕೃಷಿಯೋಗ್ಯ ಮಾಡಲು ಕೃಷಿ ಕಾರ್ಮಿಕರನ್ನೊಳಗೊಂಡು ಭೂಸೇನೆಯೊಂದರ ರಚನೆಯನ್ನೂ ಅವರು ಪ್ರತಿಪಾದಿಸಿದ್ದರು.

ರೈತ ಭಾರತದಲ್ಲಿ ನಿರಂತರ ಶೋಷಣೆಗೊಳಪಟ್ಟವನು ಎಂಬುದನ್ನ ಗಮನಿಸಿದ್ದ ಲೋಹಿಯಾ ಕೃಷಿ ಮತ್ತು ಕೈಗಾರಿಕಾ ಬೆಲೆಗಳ ನಡುವೆ ಸದಾ ಸಮನ್ವಯವಿರುವಂತೆ ನೋಡಿಕೊಳ್ಳಲು ಒಂದು ಆಯೋಗವಿರಬೇಕೆಂದು ಸೂಚಿಸಿದ್ದರು. ಭಾರತೀಯ ಸಮಾಜವಾದಿ ಚಳುವಳಿ ಆರಂಭದಿಂದಲೂ ಕೈಗಾರಿಕಾ ಮತ್ತು ಸರ್ಕಾರಿ ಸೇವಾ ಕಾರ್ಮಿಕರ ಸಂಘಟನೆಯ ಕಡೆಗೇ ಗಮನ ಕೊಡುತ್ತಿದ್ದಾಗ ಲೋಹಿಯಾ ರೈತ ಸಂಘಟನೆಯ ಕಡೆ ಗಮನ ಹರಿಸಿದರು. ಹಿಂದ್ ಕಿಸಾನ್ ಪಂಚಾಯ್ತ್‌ನ ಮೊದಲ ಅಧ್ಯಕ್ಷರಾದ ಅವರು ಉತ್ತರ ಮತ್ತು ಮಧ್ಯಭಾರತದಲ್ಲಿ ಭೂ ವಿತರಣೆ, ನೀರಾವರಿ ಮತ್ತು ಕೃಷಿ ಬೆಲೆಗಳ ಸಂಬಂಧವಾಗಿ ಅನೇಕ ಹೋರಾಟಗಳ ನೇತೃತ್ವ ವಹಿಸಿ, ಅನೇಕ ಬಾರಿ ಬಂಧನ,

ಹಿಂಸೆಗಳಿಗೆ ಒಳಗಾದರು. ಇವುಗಳಲ್ಲಿ ಕರ್ನಾಟಕದ ಕಾಗೋಡು ಸತ್ಯಾಗ್ರಹವೂ ಒಂದೆಂಬುದನ್ನು ಈ ಹಿಂದೆಯೇ ಹೇಳಲಾಗಿದೆ. ಲೋಹಿಯಾರ ರೈತ ಪ್ರೀತಿಯನ್ನು ಮೆಚ್ಚಿದ ಉತ್ತರ ಪ್ರದೇಶದ ಪತ್ರೇಡಿ ಗ್ರಾಮದ ಜನರು ಸ್ಥಳೀಯ ತೊರೆಯೊಂದಕ್ಕೆ ಕಟ್ಟೆ ಕಟ್ಟಿ ಜಲಾಶಯವೊಂದನ್ನು ನಿರ್ಮಿಸಿ ಅದಕ್ಕೆ 'ಲೋಹಿಯಾ ಸಾಗರ' ಎಂದು ಹೆಸರಿಟ್ಟು ಸಂತೋಷಿಸಿದರು. ಲೋಹಿಯಾ ಬೃಹತ್ ಅಣೆಕಟ್ಟು-ಜಲಾಶಯಗಳಿಗೆ ಬದಲಾಗಿ ಸ್ಥಳೀಯ ಜನರ ಶ್ರಮದಾನದ ಮೂಲಕ ಸಣ್ಣ ಕೆರೆ-ಕಾಲುವೆಗಳ ವ್ಯವಸ್ಥೆಯನ್ನು ನಿರ್ಮಿಸುವುದರ ಪರವಾಗಿದ್ದರು. ಗುದ್ದಲಿ ಸಮಾಜವಾದಿ ಸಂಸ್ಕೃತಿಯ ಸಂಕೇತವಾಗಬೇಕೆಂದು ಅವರು ಕರೆ ಕೊಟ್ಟರು. ಇದನ್ನು ಸಾಕಾರಗೊಳಿಸಲೆಂಬಂತೆ ಬುಲಂದ್ ಷಹರ್ ಬಳಿ ರೈತರು ಶ್ರಮದಾನದ ಮೂಲಕ ನೂರು ಎಕರೆ ಭೂಮಿಗೆ ನೀರುಣಿಸುವ ಕಾಲುವೆಗಳನ್ನು ನಿರ್ಮಿಸಿದರು.

ಗುದ್ದಲಿ-ಸೆರೆಮನೆ-ವೋಟು

ಭಾರತೀಯ ಸಮಾಜವಾದಿ ರಾಜಕಾರಣದ ಸಾಧನಗಳಾಗಿ ಗುದ್ದಲಿಯ ಜೊತೆಗೆ ಸೆರಮನೆ ಮತ್ತು ವೋಟನ್ನೂ ಸೇರಿಸಿದ ಲೋಹಿಯಾ, ಗುದ್ದಲಿ ರಚನಾತ್ಮಕ ಚಟುವಟಿಕೆಗಳ ಸಂಕೇತವಾದರೆ ಸೆರಮನೆ ಅನ್ಯಾಯದ ವಿರುದ್ಧ ಪ್ರತಿಭಟನೆಯ ಸಂಕೇತ ಹಾಗೂ ವೋಟು ಚುನಾವಣಾ ರಾಜಕಾರಣದ ಸಂಕೇತ ಎಂದು ವಿವರಿಸಿದ್ದರು. ನೆಹರೂ ಅವರ ದಟ್ಟ ಪ್ರಭಾವದಲ್ಲಿ ವೋಟಿನ ರಾಜಕಾರಣದಲ್ಲಿಯಾಗಲೀ ಮತ್ತು ಸಮಾಜವಾದಿಗಳ ತಾತ್ವಿಕ ಮತ್ತು ಸಂಘಟನಾತ್ಮಕ ಏಕತೆಯ ಕೊರತೆಯಿಂದಾಗಿ ಗುದ್ದಲಿ ಕೆಲಸದಲ್ಲಾಗಲೀ ಲೋಹಿಯಾ ಅಷ್ಟೇನೂ ಯಶಸ್ವಿಯಾಗದಿದ್ದರೂ, ಅನ್ಯಾಯದ ವಿರುದ್ಧ ಪ್ರತಿಭಟನೆಗಳ ಮೂಲಕ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅವರು ೨೨ ಬಾರಿ ಸೆರೆಮನೆ ಸೇರಿ

ಒಂದು ದಾಖಲೆಯನ್ನೇ ನಿರ್ಮಿಸಿದರು. ಈ ಗುದ್ದಲಿ, ವೋಟು ಮತ್ತು ಸೆರೆಮನೆಗಳ ಪೈಕಿ ಜಯಪ್ರಕಾಶ್ ನಾರಾಯಣರು ಗುದ್ದಲಿ ಹಿಡಿದು (ಸರ್ವೋದಯಕ್ಕೆ) ಹೋದರೆ ಮತ್ತು ಅಶೋಕ ಮೆಹ್ತಾ, 'ಹಿಂದುಳಿದ ಆರ್ಥಿಕತೆಯ ಒತ್ತಾಯ'ಗಳ ನೆಪ ಹೇಳಿ ಕಾಂಗ್ರೆಸ್ ಸೇರಿ ವೋಟಿನ ಹಾದಿ ಹಿಡಿದರೆ, ಏಕಾಕಿಯಾದ ಲೋಹಿಯಾ ತಮ್ಮ ಕನಸಿನ ಸಮಾನತೆಯ ಸಾಧನೆಗಾಗಿ ಅನ್ಯಾಯಗಳ ವಿರುದ್ಧ ಪ್ರತಿಭಟನೆ ನಡೆಸಿ ಸೆರೆಮನೆ ಸೇರುತ್ತಾ ಹೋದರೆಂದು ಸಮಾಜವಾದಿ ಚಳುವಳಿಯ ಇತಿಹಾಸಕಾರರು ಆಡುವ ವ್ಯಂಗ್ಯ, ಲೋಹಿಯಾ ವಿಷಯದಲ್ಲಿ ಸ್ವಲ್ಪ ಕ್ರೂರವೇ ಆಗಿದೆ. ಈ ದೃಷ್ಟಿಯಿಂದ ಭೋಲಾ ಚಟರ್ಜಿ ತಮ್ಮ ಗೆಳೆಯ ಲೋಹಿಯಾ ಕುರಿತು ಬರೆದಿರುವ ಅದ್ಭುತ ಲೇಖನವೊಂದಕ್ಕೆ 'ವಿಚಾರಶೀಲನೊಬ್ಬನ ಏಕಾಕಿತನ' ಎಂಬ ಶೀರ್ಷಿಕೆ ನೀಡಿರುವುದು ಉಚಿತವೇ ಆಗಿದೆ.

–೭–

ಜಾತಿ ವಿನಾಶ

ಅದೇನೇ ಇರಲಿ, ತಮ್ಮ ಕನಸಿನ ಸಮಾಜವಾದಿ ಸಮಾಜವನ್ನು ನಿರ್ಮಿಸಲು, ಆ ದಿಸೆಯಲ್ಲಿ ಜನತಾಶಕ್ತಿಯನ್ನು ಸಂಘಟಿಸುವ ರಾಜಕೀಯ ಹೋರಾಟದ ಜೊತೆಗೇ, ಸಮಕಾಲೀನ ಸಮಾಜದಲ್ಲಿ ಚಾರಿತ್ರಿಕ ಕಾರಣಗಳಿಂದಾಗಿ ಬೇರೂರಿರುವ ಸಾಮಾಜಿಕ ಅಸಮಾನತೆಯ ಬೇರುಗಳನ್ನು ಕಿತ್ತು ಹಾಕುವ ಸಾಂಸ್ಕೃತಿಕ ಕೆಲಸವೂ ಆಗಬೇಕು ಎಂದು ಲೋಹಿಯಾ ಪ್ರತಿಪಾದಿಸಿದರು. ವರ್ಣಬೇಧ, ಜಾತಿ ಬೇಧ ಮತ್ತು ಲಿಂಗಬೇಧಗಳನ್ನು ಅವರು ಅಸಮಾನತೆಯ ಮೂಲಗಳೆಂದು ಗುರುತಿಸಿದರು. ಏಷ್ಯಾ ಮತ್ತು ವಿಶ್ವ ಸಮಾಜವಾದಿ ವೇದಿಕೆಗಳಲ್ಲಿ ಅವರು ವರ್ಣಬೇಧ ನೀತಿಯ ವಿರುದ್ಧ ಗುಡುಗಿದರೆ, ಭಾರತದಲ್ಲಿ

ಜಾತಿ ಮತ್ತು ಲಿಂಗ ಪ್ರತ್ಯೇಕತೆಗಳ ವಿರುದ್ಧ ಸಮರವನ್ನೇ ಸಾರಿದರು. ಜಾತಿವಿನಾಶ ಭಾರತೀಯ ಸಮಾಜವಾದಿ ಚಳುವಳಿಯ ಮುಂಚೂಣಿ ಕಾರ್ಯಕ್ರಮಗಳಲ್ಲಿ ಒಂದಾಯಿತು. ಜಾತಿ ಪದ್ಧತಿ ಭಾರತೀಯ ಸಮಾಜದ ಸ್ಥಿರತೆಗೆ ಕಾರಣವಾಗಿದೆ ಎಂಬ ಸಾಂಪ್ರದಾಯಿಕವಾದವನ್ನು ಲೋಹಿಯಾ ಅಪದ್ಧ ಎಂದು ಟೀಕಿಸಿದರು. ಭಾರತಕ್ಕೀಗ ಬೇಕಾಗಿರುವುದು ಮರ, ಬಂಡೆಗಳ ಸ್ಥಿರತೆಯಲ್ಲ, ಭಾರತೀಯ ಸಮಾಜದಲ್ಲಿ ಬದಲಾವಣೆ; ಈ ಬದಲಾವಣೆ ಜಾತಿ ಪದ್ಧತಿ ನಾಶವಾಗದೆ ಸಾಧ್ಯವಿಲ್ಲ ಎಂದರು. ಭಾರತದ ಮೇಲಿನ ಎಲ್ಲ ದುರಾಕ್ರಮಣಗಳೂ, ಶೋಷಣೆಯೂ ಸಾಧ್ಯವಾಗಿ; ಅದು ದಾರಿದ್ರ್ಯಕ್ಕೀಡಾಗಿರುವುದಕ್ಕೆ ಮುಖ್ಯವಾಗಿ ಸಮಾಜವನ್ನು ಮೇಲು-ಕೀಳುಗಳಾಗಿ ಒಡೆದು ಸಾಮಾಜಿಕ ಐಕ್ಯತೆಗೆ ಧಕ್ಕೆ ತಂದಿರುವ ಜಾತಿಪದ್ಧತಿಯೇ ಕಾರಣವೆಂದು ವಾದಿಸಿದರು. ಹಾಗಾಗಿ ಸಮಾನತೆ ಮತ್ತು ಪ್ರಗತಿಗಾಗಿ ಜಾತಿ ವಿನಾಶ ಅಗತ್ಯ ಎಂದು ಲೋಹಿಯಾ ಘೋಷಿಸಿದರು.

ಇದಕ್ಕಾಗಿ ಸಹಭೋಜನ, ಅಂತರ್ಜಾತಿಯ ಮದುವೆಗಳಿಗೆ ಪ್ರೋತ್ಸಾಹ ಹಾಗೂ ಹಿಂದುಳಿದ, ದಲಿತ ಹಾಗೂ ಆದಿವಾಸಿ ಜಾತಿಗಳಿಗೆ ವಿಶೇಷ ಅವಕಾಶಗಳ ಪ್ರಾಶಸ್ತ್ಯಗಳ ಜೊತೆಗೆ ಭೂರಹಿತರಿಗೆ ಭೂವಿತರಣೆಯ ನೀತಿಯನ್ನು ಲೋಹಿಯಾ ಪ್ರತಿಪಾದಿಸಿದರು. ಭಾರತದಲ್ಲಿ ಬ್ರಾಹ್ಮಣ ಮತ್ತು ಶೂದ್ರರಿಬ್ಬರೂ ಜಾತಿಪದ್ಧತಿಗೆ ಸಿಕ್ಕಿ ಅರೆಜೀವವಾಗಿ ಬಿದ್ದಿದ್ದು; ಶೂದ್ರ ಬೀಜವಾಗಿ, ಬ್ರಾಹ್ಮಣ ಗೊಬ್ಬರವಾಗಿ ಸಮಾಜವಾದಿ ಬೆಳೆ ತೆಗೆಯಬೇಕಾಗಿದೆ ಎಂದು ಅವರು ಸೂಚಿಸಿದರು. ಈ ಎಲ್ಲ ವಿಚಾರಗಳ ಪ್ರಚಾರಕ್ಕಾಗಿ ತಮ್ಮ ಪಕ್ಷದ ವತಿಯಿಂದ 'ಜಾತಿವಿನಾಶ ಸಮ್ಮೇಳನ'ಗಳನ್ನು ಆಯೋಜಿಸಿದರು. ಈ ಎಲ್ಲ ತತ್ವ-ಕಾರ್ಯಕ್ರಮಗಳ ಪ್ರಾತ್ಯಕ್ಷಿಕೆ ಎಂಬಂತೆ ಅವರು ೧೯೬೦ರ

ಚುನಾವಣೆಗಳಲ್ಲಿ, ಗ್ವಾಲಿಯರ್‌ನಲ್ಲಿ ಸ್ವತಂತ್ರ ಪಕ್ಷದ ಅಭ್ಯರ್ಥಿಯಾಗಿದ್ದ ಅಲ್ಲಿನ ಮಹಾರಾಣಿ ವಿಜಯರಾಜೇ ಸಿಂಧಿಯಾ ವಿರುದ್ಧ ಆ ನಗರದಲ್ಲಿ ಝಾಡಮಾಲಿಯಾಗಿದ್ದ ಸುಖೋರಾಣಿ ಎಂಬ ಮಹಿಳೆಯನ್ನು ತಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ನಿಲ್ಲಿಸಿ ರಾಷ್ಟ್ರದ ಗಮನ ಸೆಳೆದರು.

ಲಿಂಗ ತಾರತಮ್ಯದ ಪ್ರಶ್ನೆ

ಜಾತಿ ತಾರತಮ್ಯದ ಪ್ರಶ್ನೆಯೊಂದಿಗೆ ಲಿಂಗತಾರತಮ್ಯದ ಪ್ರಶ್ನೆಯನ್ನೂ ಎತ್ತಿಕೊಂಡ ಲೋಹಿಯಾ, ಮಹಿಳೆ ಪುರುಷನಿಗೆ ಎಲ್ಲ ಕ್ಷೇತ್ರಗಳಲ್ಲೂ ಸಮಾನ ಅವಕಾಶಗಳಿಗೆ ಬಾಧ್ಯಳು ಎಂದು ಪ್ರತಿಪಾದಿಸಿದರು. ಇದಕ್ಕಾಗಿ ಗಂಡು-ಹೆಣ್ಣಿನ ಸಂಬಂಧಗಳ ವಿಷಯದಲ್ಲಿ ಪಾರಂಪರಿಕವಾಗಿ ಉಂಟಾಗಿರುವ ಜಡತೆಯನ್ನು ನೀಗದ ಹೊರತು ಭಾರತದ ಚೇತನ ಇಡಿಯಾಗಿ ಜಾಗೃತ ವಾಗದು ಎಂದರು. ಗಂಡು-ಹೆಣ್ಣಿನ ಸಂಬಂಧದಲ್ಲಿ ಸುಳ್ಳು, ಅತ್ಯಾಚಾರ, ವಚನ ಭ್ರಷ್ಟತೆಗಳ ಹೊರತಾಗಿ ಇನ್ನೆಲ್ಲ ಕ್ಷಮ್ಯ ಎಂದು ಅವರು ಅಭಿಪ್ರಾಯಪಟ್ಟರು. ನಮ್ಮ ತಂದೆ ತಾಯಿಗಳು ಹೆಣ್ಣು ಮಕ್ಕಳ ವಿಷಯದಲ್ಲಿ ಆರೋಗ್ಯ ಮತ್ತು ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವಷ್ಟರ ಮಟ್ಟಿಗೆ ಮಾತ್ರ ತಮ್ಮ ಜವಾಬ್ದಾರಿಯನ್ನು ಸೀಮಿತಗೊಳಿಸಿಕೊಂಡು, ಅವರು ಮುಕ್ತವಾಗಿ ಬೆಳೆಯಲು ಮತ್ತು ತಮ್ಮ ಬದುಕು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಸೂಚಿಸಿದರು. ಅಷ್ಟೇ ಅಲ್ಲ, ವಿವಾಹ ಸಂಬಂಧದಲ್ಲಿ ಹುಟ್ಟಿದ ಹತ್ತು ಕೆಲಸಕ್ಕೆ ಬಾರದ ಮಕ್ಕಳಿಗಿಂತ ಮುಕ್ತ ಸಂಬಂಧದಲ್ಲಿ ಹುಟ್ಟಿದ ಒಂದು ಪ್ರತಿಭಾಶಾಲಿ ಮಗು ಉತ್ತಮವಲ್ಲವೇ ಎಂದು ದಿಟ್ಟವಾಗಿ ಪ್ರಶ್ನಿಸಿದರು. ವಿವಾಹಪೂರ್ವ ಗರ್ಭಪಾತ ಮತ್ತು ತಾಯ್ತನಗಳನ್ನು ಸಹಾನುಭೂತಿಯಿಂದ ನೋಡುವ

ಪ್ರಬುದ್ಧತೆಯನ್ನು ಬೆಳೆಸಿಕೊಳ್ಳದ ಹೊರತು ನಮ್ಮ ಸಮಾದಲ್ಲಿ ಗಂಡು-ಹೆಣ್ಣಿನ ಸಂಬಂಧ ಶೋಷಣೆಯ ನೆಲೆಯಲ್ಲೇ ಉಳಿಯುವುದು ಎಂದು ಅವರು ಅಭಿಪ್ರಾಯಪಟ್ಟರು.

ಹೆಣ್ಣಿನ ವ್ಯಕ್ತಿತ್ವವನ್ನು ಅವಮಾನಿಸುವ ಪರದಾ, ಬುರ್ಖಾ, ಸುಲಭ ತಲಾಖ್ ಪದ್ಧತಿಗಳನ್ನು ನಿಷೇಧಿಸಬೇಕೆಂದ ಲೋಹಿಯಾ; ಹಿಂದೂ, ಕ್ರಿಶ್ಚಿಯನ್ ಹಾಗೂ ಮುಸ್ಲಿಂ ವೈಯುಕ್ತಿಕ ಕಾನೂನುಗಳನ್ನು ಸಮಾನತೆಯ ಒರೆಗಲ್ಲಿನಲ್ಲಿ ಪರಿಷ್ಕರಿಸಿದ ಸಮಾನ ನಾಗರಿಕ ಸಂಹಿತೆಗಾಗಿ ಒತ್ತಾಯಿಸಿದರು. ಅಲ್ಲದೆ, ಅದನ್ನು ೧೯೬೭ರಲ್ಲಿ ತಮ್ಮ ಪಕ್ಷದ ಚುನಾವಣಾ ವಿಷಯವನ್ನಾಗಿ ಘೋಷಿಸುವ ದುಸ್ಸಾಹಸವನ್ನೂ ಮಾಡಿದರು. ಭಾರತೀಯ ಮಹಿಳೆಗೆ ಪತಿ ಭಕ್ತಿಯ ಪ್ರತೀಕವಾದ ಸಾವಿತ್ರಿ ಆದರ್ಶಳಾಗದೆ, ಛಲ, ವಿವೇಕ ಮತ್ತು ಜಾಣ್ಮೆಗಳ ಮೂಲಕ ಸ್ತ್ರೀಶಕ್ತಿಯ ಸಂಕೇತದಂತಿರುವ ದ್ರೌಪದಿ ಸ್ಫೂರ್ತಿಯಾಗಬೇಕೆಂದು ಅವರು ಸೂಚಿಸಿದರು. ಹೆಣ್ಣಿನ ಶೋಷಣೆಯ ಸಣ್ಣ ವಿವರಗಳ ಕಡೆಗೂ ತಮ್ಮ ಗಮನ ಹರಿಸಿದ ಲೋಹಿಯಾ, ನಮ್ಮ ಅಡಿಗೆಮನೆಗಳು ಅಷ್ಟೇಕೆ ಕಿರಿದಾಗಿರಬೇಕು ಎಂದು ಪ್ರಶ್ನಿಸಿದರು! ಕಪ್ಪು ಮೈಬಣ್ಣದ ಯುವತಿಯರ ಕೀಳರಿಮೆಯನ್ನು ತೊಡೆಯಲು ಮೈಬಣ್ಣಕ್ಕೂ ಸೌಂದರ್ಯಕ್ಕೂ ಸಂಬಂಧ ಕಲ್ಪಿಸಿದ ಆಧುನಿಕ ರಾಜಕಾರಣದ ಬಣ್ಣ ಬಯಲು ಮಾಡಿದರು. ಇದರ ಭಾಗವಾಗಿ, ಹೇಗೆ ಭಾರತೀಯ ಪರಂಪರೆಯ ಸುಂದರಿಯರೆಲ್ಲರೂ ಕಪ್ಪು ಮೈಬಣ್ಣ ದವರಾಗಿದ್ದಾರೆಂದು ಹೇಳುತ್ತಾ, ತಮ್ಮ ಸಮಾಜವಾದದ ಭಾಗ ವಾಗಿ ಹೊಸ ಸೌಂದರ್ಯ ಮೀಮಾಂಸೆಯನ್ನು ರೂಪಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಧರ್ಮ ಮತ್ತು ಸಮಾಜವಾದ

ಆದರೆ ಜಾತಿ ಮತ್ತು ಲಿಂಗ ತಾರತಮ್ಯಗಳಿಗೆ ಆಸರೆ

ನೀಡುತ್ತದೆಂದು ಇಡಿಯಾಗಿ ಧರ್ಮದ ಕಲ್ಪನೆಯನ್ನೇ ನಿರಾಕರಿಸುವ ಸಮಾಜವಾದಿಗಳ ನಿಲುವು ಬದಲಾಗಬೇಕೆಂದು ಲೋಹಿಯಾ ಸೂಚಿಸುತ್ತಾರೆ. ಮನುಷ್ಯ ಸಂಸ್ಕೃತಿಯೊಂದಿಗೇ ಬೆಳೆದು ಬಂದಿರುವ ಧರ್ಮದ ಪರಿಕಲ್ಪನೆಗೆ ನಾಲ್ಕು ಆಯಾಮಗಳಿವೆ ಎಂದು ಅವರು ವಿಶ್ಲೇಷಿಸುತ್ತಾರೆ. ಧ್ಯಾನ, ಪ್ರಾರ್ಥನೆಗಳ ರೂಪದ ಅನಂತದೊಡನೆ ವೈಯಕ್ತಿಕ ಸಂವಾದ ಹಾಗೂ ಸಾಮಾಜಿಕ ಸದ್ವರ್ತನೆಯ ನೈತಿಕ ತರಬೇತಿ ಅದರ ಎರಡು ಆಯಾಮಗಳಾದರೆ; ಅನ್ಯಮತ ಅಸಹನೆ ಹಾಗೂ ಆಕ್ರಮಣದ ಮನೋಭಾವ ಮತ್ತು ಆಸ್ತಿ ಹಾಗೂ ಅಧಿಕಾರಗಳ ವಿಷಯದಲ್ಲಿ ಜಾತಿ ಮತ್ತು ಲಿಂಗ ತಾರತಮ್ಯಕ್ಕೆ ಅವಕಾಶ ನೀಡುವ ಶಾಸ್ತ್ರಗಳು ಅದರ ಇನ್ನೆರಡು ಆಯಾಮಗಳು. ಮೊದಲೆರಡನ್ನು ಮಾನ್ಯ ಮಾಡಿ, ಕೊನೆಯೆರಡನ್ನು ತಿರಸ್ಕರಿಸಬೇಕು ಎಂದವರು ಅಭಿಪ್ರಾಯಪಡುತ್ತಾರೆ. ಮತಾಂತರ ಸ್ವಾತಂತ್ರ್ಯ ಇರಬೇಕೆಂದು ವಾದಿಸುವ ಅವರು, ದುರುದ್ದೇಶಪೂರಿತ ಮತಾಂತರಗಳನ್ನು ತಡೆಯಲು, ಎಲ್ಲ ಮತಾಂತರಗಳ ನೋಂದಣಿಯಾಗಬೇಕು ಎಂದು ಸೂಚಿಸುತ್ತಾರೆ. ಕ್ರಿಶ್ಚಿಯನ್ ಮಿಷನರಿಗಳ ಸೇವೆಯನ್ನು ಶ್ಲಾಘಿಸುವ ಲೋಹಿಯಾ, ಅವರ ಮೇಲೆ ಮತಾಂತರಗಳ ಆರೋಪ ಹೊರಿಸುವವರು ಮೊದಲು ಹರಿಜನ-ಆದಿವಾಸಿಗಳ ಸೇವೆಯಲ್ಲಿ ತೊಡಗುವ ಮೂಲಕ ಜಾತಿಪದ್ಧತಿಯನ್ನು ತೊಡೆದು ಹಾಕುವ ಕೆಲಸಕ್ಕೆ ಮುಂದಾಗಬೇಕೆಂದು ಸೂಚಿಸುತ್ತಾರೆ.

ರಾಷ್ಟ್ರ ವಿಭಜನೆಯ ಪ್ರಬಲ ವಿರೋಧಿಗಳಾಗಿದ್ದ ಲೋಹಿಯಾ, ಭಾರತ ಮತ್ತು ಪಾಕಿಸ್ತಾನಗಳು ಒಂದೇ ಜನಾಂಗ ಮತ್ತು ಒಂದೇ ರಾಷ್ಟ್ರವಾಗಿದ್ದು ಅವುಗಳು ಮುಂದೊಂದು ದಿನ ಮಹಾ ಒಕ್ಕೂಟದ ಚೌಕಟ್ಟಿನಲ್ಲಾದರೂ ಒಂದಾಗುತ್ತವೆಂಬ ಆಶಯ ವ್ಯಕ್ತಪಡಿಸುತ್ತಾರೆ. ಈ ಆಶಯದ ಈಡೇರಿಕೆ ಒಂದು

ಮುಖ್ಯ ಸಮಾಜವಾದಿ ಕಾರ್ಯಕ್ರಮವಾಗಬೇಕೆಂದು ಅವರು ಸೂಚಿಸುತ್ತಾರೆ. ಘಜ್ನಿ, ಘೋರಿ, ಬಾಬರ್‌ಗಳು ಹೊರಗಿನವರಿರಬಹುದು; ಆದರೆ ಅಕ್ಬರ್, ಷೇರ್‌ಷಹಾ, ರಜ್ಜಿಯಾಗಳು ವಿಕ್ರಮಾದಿತ್ಯ, ಅಶೋಕ, ರಾಣಾ ಪ್ರತಾಪರಂತೆ ನಮ್ಮ ಪೂರ್ವಿಕರೇ ಎಂದು ಅವರು ಗುರುತಿಸುತ್ತಾರೆ. ಈ ದೇಶ ಇಂತಹ ಅನನ್ಯ ಸಾಂಸ್ಕೃತಿಕ ಅನುಸಂಧಾನದ ಮೂಲಕವೇ ಒಂದು ರಾಷ್ಟ್ರವಾಗಿರುವುದು ಎಂದು ಅವರು ಸೂಚಿಸುತ್ತಾರೆ. ಭಾರತದ ಮುಸ್ಲಿಮರು ಈ ದೇಶಕ್ಕೆ ಸಂಪೂರ್ಣ ಅರ್ಪಿತರಾಗಿದ್ದಾರೆಂಬ ಭಾವನೆ ಎಲ್ಲರಲ್ಲೂ ಹುಟ್ಟಿದ ಕ್ಷಣವೇ ಪಾಕಿಸ್ತಾನದ ಅಡಿಗಲ್ಲುಗಳು ಅಲ್ಲಾಡತೊಡಗುತ್ತವೆ ಎಂದ ಲೋಹಿಯಾ, ಯಾರು ಈ ದೇಶದಲ್ಲಿ ಮುಸ್ಲಿಂ ವಿರೋಧಿಗಳೋ ಅವರು ಪಾಕಿಸ್ತಾನ್ ಪರವಾದ ಏಜೆಂಟ್ ಎನಿಸಿಕೊಳ್ಳುತ್ತಾರೆ ಎಂದೂ ಎಚ್ಚರಿಸಿದರು.

ವಸಾಹತುಶಾಹಿ ಶಿಕ್ಷಣ ನೀತಿ

ಶಿಕ್ಷಣವನ್ನು ಕುರಿತಂತೆ ಲೋಹಿಯಾ, ಭಾರತದ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಎಲ್ಲಾ ವಿಷಯಗಳಲ್ಲೂ ಪಾಶ್ಚಿಮಾತ್ಯ ಪರಿಕಲ್ಪನೆಗಳನ್ನು ನಂಬಿ ಗಾಣಕ್ಕೆ ಕಟ್ಟಿದ ಎತ್ತಿನಂತೆ ಸುತ್ತಿದ ದಾರಿಯನ್ನೇ ಸುತ್ತುತ್ತಿದೆ ಎಂದು ಅಭಿಪ್ರಾಯಪಟ್ಟರು. ಸ್ವಾತಂತ್ರ್ಯ, ಸಮಾನತೆ, ಸೋದರತೆ, ಬಂಡವಾಳವಾದ, ವಸಾಹತುಶಾಹಿ, ಪ್ರಗತಿ, ಅಭಿವೃದ್ಧಿ, ಶಿಕ್ಷಣ ಇತ್ಯಾದಿ ಪರಿಕಲ್ಪನೆಗಳನ್ನು ದೇಶೀಯ ಸಂದರ್ಭದ ಪರಿಶೀಲನೆಗೆ ಒಡ್ಡದೆ ನಮ್ಮ ಸಂಶೋಧನೆಗಳು ಜಡವಾಗಿವೆ. ಇದಕ್ಕೆ ಕಾರಣ, ಶಿಕ್ಷಣ ಆಧುನಿಕತೆಯ ಹೆಸರಿನಲ್ಲಿ ವಸಾಹತುಶಾಹಿ ಮನಃಸ್ಥಿತಿಯಲ್ಲೇ ಉಳಿದಿರುವುದು. ಹಾಗಾಗಿಯೇ ಸ್ವಾತಂತ್ರ್ಯಾನಂತರವೂ ಭಾರತದಲ್ಲಿ ಆಡಳಿತ ಮತ್ತು ಶಿಕ್ಷಣ ಇಂಗ್ಲಿಷ್‌ನಲ್ಲೇ

ನಡೆಯುತ್ತಿರುವುದು. ಜನರದಲ್ಲದ ಭಾಷೆಯಲ್ಲಿ ಆಡಳಿತ ನಡೆಸುವುದು ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ; ಸಮಾನತೆಯ ಸಾಧನೆಗೂ ಒಂದು ದೊಡ್ಡ ಅಡ್ಡಿಯಾಗಿದೆ ಎಂದು ಲೋಹಿಯಾ ವಾದಿಸಿದರು. ಎಲ್ಲಿಯವರೆಗೆ ನಮ್ಮ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಒದಗಿಸಲಾಗುವುದಿಲ್ಲವೋ ಅಲ್ಲಿಯವರೆಗೆ ಇಲ್ಲಿ ಜನಪರವಾದ ಯಾವ ಮೂಲಭೂತ ಸಂಶೋಧನೆಯೂ ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು. ಅದು ಇಂದಿಗೂ ನಿಜವಾಗಿರುವುದನ್ನು ನಾವು ಗಮನಿಸಬಹುದು.

ನಮ್ಮ ಬಹಳಷ್ಟು ಸಂಶೋಧನೆಗಳು ಅಮೂರ್ತ ಪಾಂಡಿತ್ಯ ಪ್ರದರ್ಶನಗಳ ಅಸಂಗತಗಳಾಗಿವೆ. ಸಮಾನತೆಯ ಸಾಧನೆಗಾಗಿ ಪ್ರತಿಪಾದಿಸಲ್ಪಟ್ಟ ಸಣ್ಣ ಘಟಕಗಳ ತಂತ್ರಜ್ಞಾನ ಕ್ಷೇತ್ರದಲ್ಲಿ ಯಾವುದೇ ಗಣನೀಯ ಸಂಶೋಧನೆ ನಡೆಯದಿರಲು ಕೂಡಾ, ನಮ್ಮ ಸಂಶೋಧನೆಗಳು ಜನಸಂಪರ್ಕ ಕಳೆದುಕೊಂಡು ಪಾಶ್ಚಿಮಾತ್ಯ ಸಂಶೋಧನೆಗಳ ಬಾಲಂಗೋಚಿಗಳಾಗುವುದಕ್ಕೆ ಸೀಮಿತವಾಗಿರುವುದೇ ಕಾರಣ ಎಂದು ಅವರು ಹೇಳುತ್ತಾರೆ. ಅವರ ಪ್ರಕಾರ ಈ ದೋಷದ ಹಿಂದೆ ಇರುವುದು ಇಂಗ್ಲಿಷ್ ಶಿಕ್ಷಣ. ಇಂಗ್ಲಿಷ್ ವಿಷಯ ಗ್ರಹಿಕೆಯನ್ನು ಮಸುಕುಗೊಳಿಸುವುದಲ್ಲದೆ, ನಮ್ಮ ಆಲೋಚನಾಕ್ರಮವನ್ನು ಭ್ರಷ್ಟಗೊಳಿಸುತ್ತದೆ. ಹಾಗಾಗಿ ಇಂಗ್ಲಿಷ್, ಆಡಳಿತ ಮತ್ತು ಶಿಕ್ಷಣದ ಭಾಷೆಯಾಗಿ ಭಾರತದಲ್ಲಿ ಅಸಮಾನತೆ ಬೇರೂರಲು ಕಾರಣವಾಗಿದೆ. ಈ ಹಿನ್ನೆಲೆಯೊಂದಿಗೆ ಲೋಹಿಯಾ ಸಮಾಜವಾದಿ ಚಳುವಳಿಯ ಅಂಗವಾಗಿ 'ಇಂಗ್ಲಿಷ್ ತೊಲಗಿಸಿ' ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಜೊತೆಗೆ ಭಾರತೀಯ ಭಾಷೆಗಳ ಬಳಕೆಯನ್ನು ಪ್ರೋತ್ಸಾಹಿಸಲು, ಆ ಬಗ್ಗೆ ಜನರಲ್ಲಿ ಆತ್ಮ ವಿಶ್ವಾಸ ತುಂಬಲು 'ಭಾರತೀಯ ಭಾಷಾ ಸಮ್ಮೇಳನ'ಗಳನ್ನೂ ಆಯೋಜಿಸಿದರು. ಲೋಹಿಯಾ ಪ್ರಕಾರ

ಆಸ್ತಿ, ಜಾತಿ ಮತ್ತು ಇಂಗ್ಲಿಷ್ ಇವು ಅಸಮಾನತೆಯ ಸಾಧನಗಳು. ಇವುಗಳಲ್ಲಿ ಯಾವುದೇ ಎರಡರ ಪ್ರಯೋಜನ ಪಡೆಯಬಲ್ಲವನು ಈ ದೇಶದಲ್ಲಿ ಆಳುವ ವರ್ಗಕ್ಕೆ ಸೇರುತ್ತಾನೆ, ಶೋಷಕನೆನಿಸಿ ಕೊಳ್ಳುತ್ತಾನೆ.

–೮–

ಗುರಿ ಮತ್ತು ಮಾರ್ಗ

ಹೀಗೆ ಶೋಷಣೆಯ ಸಾಧನಗಳು ಸಂಪತ್ತು ಮತ್ತು ಅಧಿಕಾರಗಳ ರೂಪದಲ್ಲಿ ಇರುತ್ತವೆಂದು ಭಾವಿಸಿದ್ದ ಲೋಹಿಯಾ, ಅವುಗಳನ್ನು ಪಳಗಿಸಿ ಅವುಗಳ ಶೋಷಣಾತ್ಮಕ ನೆಲೆಗಳನ್ನು ಇಲ್ಲವಾಗಿಸುವ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಸಾಧಿಸಬಹುದೆಂದು ನಂಬಿದ್ದರು. ಬಹುಶಃ ಈ ಹೊಳಹು ಅವರಿಗೆ ಸಿಕ್ಕಿದ್ದು ಗಾಂಧಿ ದರ್ಶನದಲ್ಲಿ. ರಾಜಕಾರಣವೆಂದರೆ ಒಳ್ಳೆಯದನ್ನು ಮಾಡುವುದು ಮತ್ತು ಕೆಟ್ಟದ್ದನ್ನು ತಡೆಯುವುದು ಎಂದು ನಂಬಿದ್ದ ಲೋಹಿಯಾ; ಒಳ್ಳೆಯದನ್ನು ಮಾಡಲು ವಿಕೇಂದ್ರೀಕರಣ ಮಾರ್ಗವನ್ನೂ, ಕೆಟ್ಟದ್ದನ್ನು ತಡೆಯಲು ಸತ್ಯಾಗ್ರಹವನ್ನು ತಮ್ಮ ಸಮಾಜವಾದಿ ರಾಜಕಾರಣಕ್ಕೆ ಆರಿಸಿ ಕೊಂಡರು. ಆಸ್ತಿ ಮತ್ತು ಅಧಿಕಾರಗಳನ್ನು ವಿಕೇಂದ್ರೀಕರಿಸುವ ಮೂಲಕ ಅವನ್ನು ಪಳಗಿಸುವುದೇ ಅವರ ಸಮಾಜವಾದಿ ರಾಜಕಾರಣದ ಮುಖ್ಯ ಉದ್ದೇಶವಾಗಿತ್ತು.

ಲೋಹಿಯಾ ಕೆಟ್ಟದ್ದನ್ನು ತಡೆಯಲು ಅಂದರೆ, ಅನ್ಯಾಯಗಳ ವಿರುದ್ಧ ಪ್ರತಿಭಟನೆ ನಡೆಸಲು ಆಯ್ದುಕೊಂಡದ್ದು ಗಾಂಧೀಜಿಯ ನಾಗರಿಕ ಅಸಹಕಾರ ಮಾರ್ಗವನ್ನು. ಜಗತ್ತಿನಲ್ಲಿ ಮನೆ ಮಾಡಿರುವ ಹಲವು ನೆಲೆಗಳ ಅನ್ಯಾಯ, ಅಸಮಾನತೆಗಳ ವಿರುದ್ಧ ಪ್ರತಿಭಟಿಸಿ, ಅವನ್ನು ನಿವಾರಿಸಲು ಪ್ರತಿ ಊರಿನಲ್ಲಿಯೂ

ಒಂದು ನಾಗರಿಕ ಅಸಹಕಾರ ದಳವಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಇಲ್ಲದೆ ಹೋದರೆ ಪರಿಸ್ಥಿತಿ ಕೈಮೀರಿ ಮನುಷ್ಯ ರಾಕ್ಷಸನಾಗುವ ಅಪಾಯವಿದೆ ಎಂದು ಅವರು ಭಾವಿಸಿದ್ದರು. ಈ ದೃಷ್ಟಿಯಿಂದಲೇ ಅವರು ಮಾರ್ಕ್ಸ್‌ವಾದಿಗಳ ವರ್ಗ ಹೋರಾಟದ ಕಲ್ಪನೆಯ ಸ್ಥೂಲತೆಯನ್ನು ಪ್ರಶ್ನಿಸಿದ್ದರು. ಮನುಷ್ಯ ಬದಲಾವಣೆಯ ಉಪಕರಣ ಮಾತ್ರವಲ್ಲ ಗುರಿಯೂ ಆಗಿರುವುದರಿಂದ, ಹೋರಾಟದಲ್ಲಿ ಸುಳ್ಳು, ಕಪಟ, ಹಿಂಸೆಗಳಿಂದ ಅವನ ಆತ್ಮ ಕಲುಷಿತವಾಗದಂತೆ ನೋಡಿಕೊಳ್ಳಬೇಕೆಂದು ಅವರು ಭಾವಿಸಿದ್ದರು. ಹಾಗಾಗಿ ಗುರಿಯೇ ಮಾರ್ಗವಾಗಿಯೂ ಕೈಹಿಡಿದು ನಡೆಸುವ;ಅಂದರೆ, ಗುರಿಯತ್ತ ಇಡುವ ಪ್ರತಿ ಹೆಜ್ಜೆಯೂ ತಕ್ಷಣವೇ ಗುರಿಯ ಒಂದಿಷ್ಟಾದರೂ ಅನುಭವ ನೀಡುವಂತಹ ಗುರಿ–ಮಾರ್ಗಗಳ ಅಭಿನ್ನತೆಯನ್ನು ಅವರು ಸಮಾಜವಾದದ ಒಂದು ತತ್ವವಾಗಿ ನಿರೂಪಿಸಿದ್ದರು. ಇದು ಲೋಹಿಯಾ ಅವರ ಗುರಿ ಮತ್ತು ಮಾರ್ಗಗಳ ತಾತ್ಕ್ಷಣಿಕ ಸಿದ್ಧಾಂತ ಎಂದೇ ಹೆಸರಾಗಿದೆ.

ಹಾಗಾಗಿಯೇ, ನಾಳಿನ ಕನಸಿನ ಸುಖೀರಾಜ್ಯಕ್ಕಾಗಿ ಇಂದು ಏನು ಮಾಡಿದರೂ ಕ್ಷಮ್ಯ ಎಂಬ ನೀತಿ ನಿರಪೇಕ್ಷ ವರ್ಗ ಹೋರಾಟಕ್ಕೆ ಬದಲಾಗಿ, ಇಡೀ ವ್ಯವಸ್ಥೆಯನ್ನು ಮನುಷ್ಯ ಏಕಾಕಿಯಾಗಿ ಕೂಡ ತನ್ನ ಆತ್ಮಬಲದ ಮೂಲಕ ಎದುರಿಸ ಬಹುದೆಂಬ ಗಾಂಧೀತತ್ವದ ಆಧಾರದ ನಾಗರಿಕ ಅಸಹಕಾರ ಮಾರ್ಗ ಲೋಹಿಯಾರನ್ನು ಆಕರ್ಷಿಸಿತ್ತು. ಆದರೆ ಸಮಾಜವಾದಿ ಯಾಗಿ ಅವರು ಮನುಷ್ಯನ ಈ ಆತ್ಮಬಲದಲ್ಲಿ ಸಿಟ್ಟನ್ನೂ ಸೇರಿಸಿಕೊಂಡಿದ್ದರು. ಅವರ ಪ್ರಕಾರ ಸಮಾಜವಾದಿಯೊಬ್ಬ ಗುರಿಯಾಗಿ ವಿಶ್ವಪ್ರೇಮದ ಪ್ರತೀಕ; ಮಾರ್ಗವಾಗಿ ಎಲ್ಲ ಶೋಷಣೆಯ ವಿರುದ್ಧ ಕ್ರಾಂತಿಕಾರಿ ಸಿಟ್ಟಿನ ಪ್ರತೀಕ. ಸಮಾಜವಾದಿ

ಸತ್ಯಾಗ್ರಹಿಯ ಒಂದು ಕಣ್ಣಿನಲ್ಲಿ ಅನ್ಯಾಯಕ್ಕೊಳಗಾದವರ ಬಗ್ಗೆ ಕರುಣೆಯ ಕಣ್ಣೀರಿದ್ದರೆ ಇನ್ನೊಂದು ಕಣ್ಣಿನಲ್ಲಿ ಅನ್ಯಾಯದ ವಿರುದ್ಧ ಕ್ರೋಧದ ಕಿಡಿ ಇರಬೇಕೆಂದು ಅವರು ಹೇಳುತ್ತಿದ್ದರು. ಹೀಗಾಗಿ ಸಮಾಜವಾದಿ ಹೋರಾಟಗಳು ಅಹಿಂಸಾತ್ಮಕವಾಗಿರುತ್ತಿದ್ದುವಾದರೂ ಉಜ್ವಲವಾಗಿರುತ್ತಿದ್ದವು. ಈ ಹಿನ್ನೆಲೆಯಲ್ಲಿಯೇ ಅವರು, ನೆಹರೂ ಸರ್ಕಾರಿ ಗಾಂಧೀವಾದದ ಮತ್ತು ವಿನೋಬಾ ಮಠೀಯ ಗಾಂಧೀವಾದದ ಪ್ರತೀಕಗಳಾದರೆ, ಸಮಾಜವಾದಿಗಳು ಬಂಡಾಯ ಗಾಂಧೀವಾದದ ಪ್ರತೀಕ ಎಂದು ಹೇಳುತ್ತಿದ್ದುದು!

ಚತುಸ್ತಂಭ ರಾಷ್ಟ್ರದ ಕಲ್ಪನೆ

ಇನ್ನು ರಾಜಕಾರಣದಲ್ಲಿ ಒಳ್ಳೆಯದನ್ನು ಮಾಡಲು ಲೋಹಿಯಾ ಪ್ರತಿಪಾದಿಸಿದ ವಿಕೇಂದ್ರೀಕರಣದ ಪ್ರತೀಕವೇ ಚತುಸ್ತಂಭ ರಾಷ್ಟ್ರದ ಕಲ್ಪನೆ. ಗಾಂಧೀಜಿಯ ಗ್ರಾಮಸ್ವರಾಜ್ಯ ಕಲ್ಪನೆಯಿಂದ ಸ್ಫೂರ್ತಿ ಪಡೆದಂತೆ ತೋರುವ ಈ ತತ್ವ, ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು, ಅದೊಂದು ಅಸಾಧ್ಯ ಕಲ್ಪನೆ ಎಂಬ ಟೀಕೆಯಿಂದ ಪಾರು ಮಾಡಿ ಆಧುನಿಕ ಕಾಲಕ್ಕೆ ಪರಿಷ್ಕರಿಸಿದ ಮಾದರಿಯಂತಿದೆ. ರಾಜಕೀಯ ಅಧಿಕಾರವನ್ನು ಗ್ರಾಮ, ಮಂಡಲ, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಹಂಚಿದ ವಿಕೇಂದ್ರೀಕೃತ ರಾಷ್ಟ್ರದ ಕಲ್ಪನೆ ಅದು. ಇದರಿಂದ ಎಲ್ಲ ಜಾತಿ-ಜನವರ್ಗಗಳಲ್ಲೂ ನಾಯಕತ್ವ ಬೆಳೆದು ಅಧಿಕಾರದಲ್ಲಿ ಪಾಲು ಪಡೆಯುವಂತಾಗಿ, ಅಧಿಕಾರವೆಂಬುದು ಶೋಷಣೆಯ ಸಾಧನವಾಗಿ ದುರ್ಬಲಗೊಳ್ಳುವುದು ಎಂಬುದು ಅವರ ಚಿಂತನೆಯಾಗಿತ್ತು. ಹಾಗೆಯೇ ವಿವಿಧ ಮಟ್ಟದ ಸ್ಥಳೀಯತೆಯ ಆದರ್ಶಗಳೂ, ಆಶೋತ್ತರಗಳೂ -ಭಾಷೆ, ಸಂಪ್ರದಾಯ, ನೈಸರ್ಗಿಕ ಸಂಪನ್ಮೂಲ, ಉತ್ಪಾದನಾ ಕೌಶಲ್ಯ ಇತ್ಯಾದಿಗಳ ರಕ್ಷಣೆ-ತಣಿಯುವಂತಾಗಿ ಆ ಮೂಲಕ ರಾಷ್ಟ್ರದ ಬಹುಸಂಸ್ಕೃತಿಯ ಸ್ವರೂಪದ ಸಂರಕ್ಷಣೆಯೂ

ಆಗುವುದು ಎಂಬುದೂ ಇದರ ಹಿಂದಿದ್ದ ಇನ್ನೊಂದು ಪ್ರೇರಣೆಯಾಗಿತ್ತು. ಇದಕ್ಕೆ ಪೂರಕವಾಗಿ ಪ್ರತಿ ರಾಜಕೀಯ ಪಕ್ಷವೂ ತನ್ನ ಪದಾಧಿಕಾರಗಳಲ್ಲಿ ಶೇ.೬೦ರಷ್ಟು ಸ್ಥಾನಗಳ ನ್ನಾದರೂ ಶೂದ್ರರಿಗೆ, ದಲಿತರಿಗೆ, ಆದಿವಾಸಿಗಳಿಗೆ, ಮಹಿಳೆ ಯರಿಗೆ ಮತ್ತು ಅಲ್ಪಸಂಖ್ಯಾತ ಕೋಮಿನವರಿಗೆ ಮೀಸಲಿಡ ಬೇಕೆಂದು ಅವರು ಆಗ್ರಹಿಸಿದ್ದರು. ಜೊತೆಗೆ ತಮ್ಮ ಸಮಾಜವಾದಿ ಪಕ್ಷದಲ್ಲಿ ಅವರು ಈ ನೀತಿಯನ್ನು ಅಳವಡಿಸಿಕೊಂಡಿದ್ದರು.

ವಿಶ್ವ ಸರ್ಕಾರ ಮತ್ತು ವಿಶ್ವ ಪ್ರಜೆ!

ಈ ಚತುಸ್ತಂಭ ರಾಷ್ಟ್ರದ ಕಲ್ಪನೆಯ ವಿಸ್ತರಣೆಯಾಗಿ ಲೋಹಿಯಾ ವಿಶ್ವಸರ್ಕಾರದ ಪ್ರಸ್ತಾವನೆಯನ್ನು ಮುಂದಿಟ್ಟಿದ್ದರು. ತಮ್ಮ ಕನಸಿನ ಹೊಸ ವಿಶ್ವನಾಗರಿಕತೆಯ ಸಾಧ್ಯತೆಗಳು ವಿಶ್ವಸಂಸತ್ತಿನ ಮೂಲಕ ಸಾಕಾರವಾಗಬೇಕೆಂಬುದು ಅವರ ಆಶಯವಾಗಿತ್ತು. ಈ ಸಂಬಂಧ ೧೯೫೧ರಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ವಿಶ್ವಸರ್ಕಾರದ ಸಾಧ್ಯತೆ-ಬಾಧ್ಯತೆಗಳನ್ನು ಕುರಿತ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಲ್ಲಿ ಅವರು ಹೊಸ ವಿಶ್ವನಾಗರಿಕತೆಯೆಡೆಗಿನ ಕಾರ್ಯಕ್ರಮ ಸೂಚಿಯಾಗಿ ವಿಶೇಷ ಪ್ರಾಶಸ್ತ್ಯ ನೀತಿಯ ಮೂಲಕ ಜಾತಿ-ಜನಾಂಗ-ಲಿಂಗಭೇದಗಳ ನಿರ್ಮೂಲನೆ, ರಾಷ್ಟ್ರಗಳ ಆಂತರಿಕ ಮತ್ತು ಬಾಹ್ಯಸಮಾನತೆ, ಸಾಮೂಹಿಕತೆಯ ಅತಿಗಳ ವಿರುದ್ಧ ನಾಗರಿಕ ಅಸಹಕಾರ, ಸತ್ಯಾಗ್ರಹದ ಬಳಕೆ ಮತ್ತು ಸೌಂದರ್ಯ ಮೀಮಾಂಸೆಯಲ್ಲಿ ಕ್ರಾಂತಿ ಎಂಬ 'ಸಪ್ತ ಕ್ರಾಂತಿ'ಯ ಕಲ್ಪನೆಯನ್ನು ಮುಂದಿಟ್ಟರು. ಹಾಗೇ, ವಿಶ್ವ ಸರ್ಕಾರದ ಆದರ್ಶವನ್ನು ಸಾಂಕೇತಿಕವಾಗಿ ಎತ್ತಿ ಹಿಡಿಯಲೋ ಎಂಬಂತೆ, ೧೯೫೨ರಲ್ಲಿ ಬರ್ಮಾ(ಈಗಿನ ಮಯನ್ಮಾರ್)ದಲ್ಲಿ ನಡೆದ ಏಷ್ಯಾ ಸಮಾಜವಾದಿ ಸಿದ್ಧಾಂತ ಸಮ್ಮೇಳನದಲ್ಲಿ ಭಾಗವಹಿಸಲು ಕಲ್ಕತ್ತಾದಿಂದ ರಂಗೂನ್‌ಗೆ

ಪಾಸ್‌ಪೋರ್ಟ್ ಇಲ್ಲದೇ ಪ್ರಯಾಣ ಮಾಡಿದರು! ಅಲ್ಲದೆ ಇಂತಹ ವಿಶ್ವಸರ್ಕಾರದ ಪ್ರಜೆಯ ಹಕ್ಕು ಮತ್ತು ಕರ್ತವ್ಯಗಳನ್ನು ಎತ್ತಿ ಹಿಡಿಯಲೆಂಬಂತೆ; ಅವರು ಅಮೆರಿಕಾದ ಸಮಾಜವಾದಿಗಳ ಆಹ್ವಾನದ ಮೇರೆಗೆ ೧೯೬೪ರಲ್ಲಿ ಆ ದೇಶಕ್ಕೆ ಭೇಟಿ ನೀಡಿದ್ದಾಗ, ಜಾಕ್ಸನ್ ಎಂಬ ನಗರದ ಹೋಟೆಲ್‌ವೊಂದರಲ್ಲಿ ವರ್ಣಬೇಧ ಕಂಡು ಪ್ರತಿಭಟನೆ ನಡೆಸಿ ದಸ್ತಗಿರಿಗೂ ಒಳಗಾದರು! ಅದಕ್ಕಾಗಿ ಅಮೆರಿಕಾದ ಸರ್ಕಾರ ಕ್ಷಮೆ ಕೇಳುವಂತೆಯೂ ಮಾಡಿದರು!

-೯-

ಲೋಕ ಸಭೆಯಲ್ಲಿ ಲೋಹಿಯಾ

ಹೀಗೆ ತನ್ನ ವೈಚಾರಿಕತೆ ಮತ್ತು ಹೋರಾಟಗಳೆರಡರ ಮೂಲಕವೂ ಸ್ವಾತಂತ್ರ್ಯ ಹೋರಾಟಕ್ಕೆ ತನ್ನದೇ ರೀತಿಯಲ್ಲಿ ಕೊಡುಗೆ ಸಲ್ಲಿಸಿ, ತನ್ನ ಬದುಕನ್ನೇ ರಾಷ್ಟ್ರದ ಉನ್ನತಿ, ಅನ್ಯಾಯಕ್ಕೊಳಗಾದವರ ಪರವಾದ ಹೋರಾಟಕ್ಕೆ ಮುಡಿಪಾಗಿಟ್ಟ ಲೋಹಿಯಾರನ್ನು ನೆಹರೂ ಸೇರಿದಂತೆ ಸರ್ಕಾರದಲ್ಲಿದ್ದ ಅವರ ಗೆಳೆಯರು ನಡೆಸಿಕೊಂಡ ರೀತಿ ಅನಾಗರಿಕವೂ ನಾಚಿಕೆ ಗೇಡಿನದೂ ಆಗಿತ್ತು. ಲೋಹಿಯಾ ಅವರ ಮಾತುಗಳಲ್ಲೇ ಹೇಳುವುದಾದರೆ, ಬ್ರಿಟಿಷ್ ಸರ್ಕಾರಕ್ಕಿಂತ ದೇಶೀ ಸರ್ಕಾರವೇ ಅಸಂಸ್ಕೃತವೂ, ಕ್ರೂರವೂ ಆಗಿತ್ತು. ಅವರು ತಮ್ಮ ಪ್ರತಿಭಟನೆಗಳ ಸಮಯದಲ್ಲಿ ಹಾಗೂ ಸೆರೆಮನೆವಾಸಗಳ ಸಂದರ್ಭಗಳಲ್ಲಿ ಎದುರಿಸಿದ ರಾಜಕೀಯ ಮತ್ತು ದೈಹಿಕ ದೌರ್ಜನ್ಯ ಅವರನ್ನು ಘಾಸಿಗೊಳಿಸಿತ್ತು ಮತ್ತು ಕಹಿ ಮನಸ್ಸಿನವರನ್ನಾಗಿ ಮಾಡಿತ್ತು. ಸ್ವಾತಂತ್ರ್ಯೋತ್ತರ ಭಾರತದ ಎಲ್ಲ ಗೊಂದಲಮಯ ರಾಜಕಾರಣಕ್ಕೆ ನೆಹರೂರನ್ನು ಪ್ರತೀಕವಾಗಿಸಿದ್ದ ಲೋಹಿಯಾ, ತಮ್ಮ ವ್ಯಾವಹಾರಿಕ ರಾಜಕಾರಣಕ್ಕೆ ಅವರನ್ನೇ ಕೇಂದ್ರವಾಗಿಸಿ

ಕೊಂಡು ಕಟುವಾದ ದಾಳಿ ನಡೆಸಿದರು. ಇದರ ಫಲವಾಗಿ ಮಧ್ಯಮ ವರ್ಗಗಳಿಂದ ಮತ್ತು ಮಾಧ್ಯಮಗಳಿಂದ 'ಅರೆಹುಚ್ಚ', 'ತಲೆಹೋಕ', 'ಘಾತುಕ', 'ವಿನಾಶಕಾರಿ' ಇತ್ಯಾದಿ ಬಿರುದು ಬಾವಲಿಗಳನ್ನು ಪಡೆದಿದ್ದ ಅವರು, ತಮ್ಮ ಬದುಕಿನ ಕೊನೆಯ ಮೂರು ವರ್ಷಗಳ ಕಾಲವಷ್ಟೇ ಸಂಸತ್ ಸದಸ್ಯರಾಗಿ ತಮ್ಮ ಸಂಸದೀಯ ಕೌಶಲ್ಯವನ್ನು ಮೆರೆಯಲು ಸಾಧ್ಯವಾದದ್ದು. ಆ ಹೊತ್ತಿಗೆ ಅವರು ಕಾಂಗ್ರೆಸ್ಸೇತರವಾದಿ ರಾಜಕಾರಣದ ಮೂಲಕ ನೆಹರೂ ರಾಜಕಾರಣದ ಸೊಂಟ ಮುರಿದಿದ್ದರು. ಅಷ್ಟೇ ಅಲ್ಲ, ನೆಹರೂ ಕೂಡಾ ಚೀನಾ ಆಕ್ರಮಣದ ನಂತರ ತಮ್ಮ ರಾಜಕೀಯ ಮಹತ್ವಾಕಾಂಕ್ಷೆಯನ್ನೆಲ್ಲ ಕಳೆದುಕೊಂಡು ಸೋತವರಂತೆ ಹತಾಶರಾಗಿ ಅಸು ನೀಗಿದ್ದರು.

೧೯೬೩ರಲ್ಲಷ್ಟೇ ಉಪಚುನಾವಣೆಯೊಂದರ ಮೂಲಕ ಲೋಕಸಭೆಯನ್ನು ಪ್ರವೇಶಿಸಿದ ಲೋಹಿಯಾ, ಅದನ್ನೊಂದು ಜನತಾವೇದಿಕೆಯನ್ನಾಗಿ ಪರಿವರ್ತಿಸಿದರು. ಅಲ್ಲಿ 'ಅರ್ಧ ಕುದುರೆ-ಅರ್ಧ ಮನುಷ್ಯ'ರಂತಿದ್ದ ಮಾನವ ರಿಕ್ಷಾವಾಲಾಗಳ ಬದುಕಿನಲ್ಲಿನ ಅಮಾನುಷತೆಯೂ, ಬೆಳೆಗಳಿಗೆ ಬೆಲೆ ಸಿಗದೆ ಬೀದಿಗೆ ಬಿದ್ದಿದ್ದ ಬಡ ರೈತರ ಆರ್ತನಾದವೂ, ಬೆಳಗಿನ ಶೌಚ ಕರ್ಮಗಳಿಗಾಗಿ ಅಸಹಾಯಕತೆಯಿಂದ ಅಲೆದಾಡುವ ಗ್ರಾಮಾಂತರ ಮಹಿಳೆಯರ ಅಂತರಂಗದ ಬೇಗುದಿಗಳೂ, ಚಳಿ ರಾತ್ರಿಗಳಲ್ಲಿ ಬೀದಿಗಳಲ್ಲಿ ಮಲಗಬೇಕಾದ ಅನಾಥರ ಗೋಳುಗಳೂ, ಸಂವೈಧಾನಿಕ ಪಂಡಿತ ಚರ್ಚೆಗಳಷ್ಟೇ ಮಹತ್ವ ಪಡೆದು ಪ್ರತಿಧ್ವನಿಸಿದವು. ತಮ್ಮ ಜನಬದ್ಧತೆ ಮತ್ತು ಬೌದ್ಧಿಕ ಪ್ರಖರತೆಗಳಿಂದ ಅವರು ಸಂಸದೀಯ ಚರ್ಚೆಯನ್ನು ಹೊಸ ಎತ್ತರಗಳಿಗೆ ಮುಟ್ಟಿಸಿದರು. ಪ್ರಧಾನಿ ಇಂದಿರಾಗಾಂಧಿ ವಿದೇಶಿ ಅತಿಥಿಗಳಿಂದ ಪಡೆದ ವಜ್ರದ ನೆಕ್ಲೆಸ್ ಮತ್ತು ಮಿಂಕ್ ಕೋಟ್

ಪ್ರಕರಣ, ಸ್ಟಾಲಿನ್‌ನ ಪುತ್ರಿ ಸ್ವೆಟ್ಲಾನಾಳಿಗೆ ರಾಜಕೀಯ ಆಶ್ರಯ ನೀಡಲಾಗದ ಭಾರತ ಸರ್ಕಾರದ ರಾಜಕೀಯ ಹೇಡಿತನದ ಪ್ರಕರಣ ಹಾಗೂ ವಿಶ್ವಸಂಸ್ಥೆ ಪ್ರಕಟಿಸಿದ್ದ '೫೦೦೦ ವರ್ಷಗಳ ಪಾಕಿಸ್ತಾನ' ಪುಸ್ತಕ ಮುಂತಾದ ಪ್ರಕರಣಗಳಲ್ಲಿ ಲೋಹಿಯಾ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವಲ್ಲಿ ಪ್ರದರ್ಶಿಸಿದ ರಾಜಕೀಯ ಪ್ರತಿಭೆಯನ್ನು ಗಮನಿಸಿ, ಅವರನ್ನು ತೆಗಳುತ್ತಿದ್ದ ಪತ್ರಿಕೆಗಳೇ ಅವರಿಗೆ 'ಶ್ರೀಮಾನ್ ವಿರೋಧ ಪಕ್ಷ' ಎಂದು ಹೆಸರಿಸಿದವು. ಇದೆಲ್ಲದರ ಫಲ ೧೯೬೭ರ ಚುನಾವಣೆಗಳಲ್ಲಿ ಕಂಡು ಬಂತು. ಆ ಚುನಾವಣೆಗಳಲ್ಲಿ ಕಾಂಗ್ರೆಸ್ ಮೊದಲ ಬಾರಿಗೆ ಐದು ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತ್ತು. ಅಲ್ಲದೆ, ಲೋಕಸಭೆಯಲ್ಲಿ ಅದರ ಬಹುಮತ ಕ್ಷೀಣಸ್ಥಿತಿ ತಲುಪಿತ್ತು.

ಉಳಿದಿದ್ದನ್ನು ಮಾಡುವವರಾರು?

ಆದರೆ ಇದೆಲ್ಲದರ ಫಲವನ್ನು ತಮ್ಮ ಸಮಾಜವಾದಿ ರಾಜಕಾರಣಕ್ಕೆ ಬಳಸಿಕೊಳ್ಳುವ ಅದೃಷ್ಟ ಲೋಹಿಯಾರಿಗೆ ಇರಲಿಲ್ಲ. ಪ್ರತಿಭಟನೆ ಮತ್ತು ಹೋರಾಟಗಳಿಂದ ತುಂಬಿದ್ದ ವಿಶ್ರಾಂತಿ ಇಲ್ಲದ ದೀರ್ಘ ರಾಜಕೀಯ ಬದುಕಿನಿಂದಾಗಿ ಅವರ ಜೀವ ದಣಿದಿತ್ತು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಸೆರೆಮನೆ ವಾಸಗಳಿಂದಾಗಿಯೂ ಅವರ ದೇಹ ಶಿಥಿಲಗೊಂಡಿತ್ತು. ೧೯೬೭ರ ಚುನಾವಣೆಗಳ ತದನಂತರದಲ್ಲೇ ಅವರ ಆರೋಗ್ಯ ಕೆಟ್ಟು ಜನಸಾಮಾನ್ಯರ ಆಸ್ಪತ್ರೆಯೇ ಬೇಕೆಂದು ಹಠ ಮಾಡಿ ಅವರು ಸರ್ಕಾರಿ ಆಸ್ಪತ್ರೆ ಸೇರಿದರು. ಪ್ರೋಸ್ಟೇಟ್ ಗ್ರಂಥಿ ಊದಿಕೊಂಡಿದೆ, ಅದಕ್ಕೆ ಕ್ಯಾನ್ಸರ್ ತಗುಲಿದೆ, ಅದಕ್ಕೆಲ್ಲ ಅತ್ಯುತ್ತಮ ಚಿಕಿತ್ಸೆ ನೀಡಲಾಗುತ್ತಿದೆ ಎಂಬ ವರದಿಗಳ ನಡುವೆಯೂ ಅಕ್ಟೋಬರ್ ೧೨ರಂದು ಅವರು ಕೊನೆಯುಸಿರೆಳೆದರು. ಕೊನೆಯುಸಿರೆಳೆಯುವ ಮುನ್ನ ಅರೆಪ್ರಜ್ಞಾವಸ್ಥೆಯಲ್ಲಿ

ಅವರು ತಮಗೆ ತಾವೇ ಕೇಳಿಕೊಂಡ ಪ್ರಶ್ನೆ: 'ನಾನು ನನ್ನ ಅರ್ಧ ಕೆಲಸವನ್ನಷ್ಟೇ ಮಾಡಿದ್ದೇನೆ... ಉಳಿದಿದ್ದನ್ನು ಮಾಡುವವರಾರು? ಈ ದೇಶದ ಬಡವರ ಗೋಳನ್ನು ಕೇಳುವವರಾರು?'

-೧೦-

ಲೋಹಿಯಾ ನಂತರ....

ಡಾ.ರಾಮಮನೋಹರ ಲೋಹಿಯಾ ನಿಧನರಾದ ಈ ೪೩ ವರ್ಷಗಳ ನಂತರವೂ ಇದೇ ಪ್ರಶ್ನೆ ಇನ್ನೂ ಕೆಲವು ವಲಯಗಳಲ್ಲಾದರೂ ಅನುರಣಿಸುತ್ತಿದೆ. ನೆಹರೂರ ಕಲಸು ಮೇಲೋಗರ ರಾಜಕಾರಣವನ್ನೇ ಸಮಾಜವಾದಿ ರಾಜಕಾರಣ ಎಂದು ಬಿಂಬಿಸುತ್ತಾ; ಸಮಾಜವಾದ ವಿಫಲವಾಗಿ, ಅದರ ಕಾಲ ಮುಗಿದು ಮುಕ್ತ ಮಾರುಕಟ್ಟೆಯ ಯಶಸ್ವೀ ಆರ್ಥಿಕತೆಯ ಕಾಲಕ್ಕೆ ಬಂದಿದ್ದೇವೆ ಎಂದು ನಮ್ಮ ಆಡಳಿತಗಾರರು ಹೆಮ್ಮೆಯಿಂದ ಹೇಳಿಕೊಳ್ಳುವ ಈ ಕಾಲದಲ್ಲೂ ಈ ಅನುರಣನವೇಕೆ? ನಿಜ, ನಮ್ಮ ಮಾರುಕಟ್ಟೆಗಳು ವೈವಿಧ್ಯಮಯ ಗ್ರಾಹಕ ವಸ್ತುಗಳಿಂದ ತುಂಬಿ ತುಳುಕುತ್ತಿವೆ. ಕೆಲವರ ಕೊಳ್ಳುವ ಶಕ್ತಿಯೂ ಹೆಚ್ಚಾಗಿದೆ. ರಸ್ತೆಗಳಲ್ಲಿ ವೈವಿಧ್ಯಮಯ ಕಾರುಗಳು ಕಿಕ್ಕಿರಿದು ಓಡಾಡುತ್ತಿವೆ! ಜಗತ್ತಿನ ಅತಿ ಹೆಚ್ಚು ಶ್ರೀಮಂತರಿರುವ ದೇಶಗಳಲ್ಲಿ ನಮ್ಮದು ಎರಡನೆಯದೋ ಮೂರನೆಯದೋ ಸ್ಥಾನದಲ್ಲಿದೆ ಎಂದು ಹೇಳಲಾಗುತ್ತಿದೆ. ಜಾಗತಿಕ ಆರ್ಥಿಕ ಹಿಂಜರಿತದ ಈ ಸಂದರ್ಭದಲ್ಲೂ ನಮ್ಮ ದೇಶದ ಒಟ್ಟಾರೆ ರಾಷ್ಟ್ರೀಯ ಉತ್ಪನ್ನ ಪಶ್ಚಿಮದ ದೇಶಗಳಿಗಿಂತ ಹೆಚ್ಚಿನ ಗತಿಯಲ್ಲಿ ಏರುತ್ತಿದೆ ಎಂದು ಕೊಚ್ಚಿಕೊಳ್ಳಲಾಗುತ್ತಿದೆ. ಆದರೆ ಇದಕ್ಕೆ ಹಿಂದಿನ ಸರ್ಕಾರವನ್ನು ನಿಯಂತ್ರಿಸುತ್ತಿದ್ದ ಎಡಪಕ್ಷಗಳ ಸಮಾಜವಾದಿ ನೀತಿಯೇ(ಅಂದರೆ ನಮ್ಮ ಬ್ಯಾಂಕುಗಳ ಖಾಸಗೀಕರಣ ಮತ್ತು ಅಂತಾರಾಷ್ಟ್ರೀಕರಣದ ವಿರೋಧ) ಕಾರಣವೆಂಬುದನ್ನು ಮರೆಮಾಚಲಾಗುತ್ತಿದೆ.

ಮಾರುಕಟ್ಟೆಯ ಮಾಯಾಲೋಕ!

ಇಂದಿನ ಆರ್ಥಿಕತೆಯನ್ನು ನಡೆಸುತ್ತಿರುವ ಮಾರುಕಟ್ಟೆ ಎಂಬುದು ಯಾರಿಗೂ ಜವಾಬ್ದಾರವಾಗಿರದ ಒಂದು ಮಾಯಾಲೋಕವೇ ಆಗಿದೆ. ಅದರ ಹಿಂದಿರುವುದು ಬರೀ ಸಟ್ಟಾ ವ್ಯಾಪಾರ ಮತ್ತು ಲಾಭಕೋರತನ. ಇದರ ಹಿಂದಿರುವುದು ಮತ್ತೆ ಕೆಲವರ ತಣಿಯದ ಸುಖಲೋಲುಪತೆ ಮತ್ತು ಮಿತಿಯಿಲ್ಲದ ಬಂಡವಾಳ ಗುತ್ತೇದಾರಿಕೆಯ ಹಪಾಹಪಿ. ಇವರದೊಂದು ಜಾಗತಿಕ ಮಾಫಿಯಾ ಸೃಷ್ಟಿಯಾಗಿ ಜಗತ್ತನ್ನು ಆಳತೊಡಗಿದೆ. ಇಂತಹ ಆಳ್ವಿಕೆಯನ್ನಿಂದು ಜಾಗತೀಕರಣವೆಂದು ಕರೆಯಲಾಗುತ್ತಿದೆ. ಇದರ ಹೆಸರಲ್ಲಿ ರಾಷ್ಟ್ರೀಯತೆಯ ಎಲ್ಲೆಗಳು ಸಡಿಲಗೊಂಡು ಇಡೀ ವಿಶ್ವವೇ ಲಾಭಕೋರರ ಮತ್ತು ಸಟ್ಟಾ ವ್ಯಾಪಾರಿಗಳ ವ್ಯವಹಾರಗಳ ವೇದಿಕೆಯಾಗಿ ಹೋಗಿದೆ. ಇದರ ಲಾಭ ಪಡೆದ ನಮ್ಮ ದೇಶದ ಕೆಲವು ವರ್ಗಗಳು ಸುಖದ ಕಾಲ ಬಂದಿದೆ ಎಂದು ಕುಣಿಯುತ್ತಿವೆ. ಆ ಕುಣಿತದ ಅಮಲಿನಲ್ಲಿ ಈ ಸುಖ ಯಾವ ಖರ್ಚಿನಲ್ಲಿ ಬಂದಿದೆ ಎಂಬುದರ ಅರಿವೇ ಅವರಿಗಿಲ್ಲವಾಗಿದೆ!

ಇಂದು ಆಕರ್ಷಕ ಉದ್ಯೋಗವೆಂಬುದು ಈ ಸಟ್ಟಾ ವ್ಯಾಪಾರಿಗಳ, ಲಾಭಕೋರರ ಏಜೆಂಟರಾಗಿ ಸೇವೆ ಸಲ್ಲಿಸುವುದೇ ಆಗಿದೆ. ಇದರಲ್ಲಿ ಪರಿಣತಿ ಇಲ್ಲದವರು ಹಿನ್ನೆಲೆಗೆ ಸರಿದು ನಾಶವಾಗತೊಡಗಿದ್ದಾರೆ. ಈ ಅಭೂತಪೂರ್ವ ಸುಖದ ವರ್ಷಗಳಲ್ಲೇ ನಮ್ಮ ದೇಶದ ಬಡವರ ಸಂಖ್ಯೆ, ಹಸಿದವರ ಸಂಖ್ಯೆ, ನಿರ್ವಸಿತರ ಸಂಖ್ಯೆ, ಅಪೌಷ್ಟಿಕತೆಯ ಮಕ್ಕಳ ಸಂಖ್ಯೆ, ವೈವಿಧ್ಯಮಯ ಹಿಂಸಾಚಾರಗಳ ಸಂಖ್ಯೆ ಗಣನೀಯವಾಗಿ ಏರಿದೆ ಎಂಬುದು ಎಷ್ಟು ಜನರಿಗೆ ಗೊತ್ತು? ನಮ್ಮ ಕಾಡುಗಳೂ, ನದಿಗಳೂ, ಖನಿಜ ಸಂಪತ್ತೂ ಅಗ್ಗದ ಬೆಲೆಯಲ್ಲಿ

ಲೂಟಿಯಾಗುತ್ತಿದ್ದು ಅದರ ದೂರಗಾಮಿ ಪರಿಣಾಮಗಳನ್ನು ಊಹಿಸುವ ಶಕ್ತಿಯನ್ನೇ ನಾವು ಕಳೆದುಕೊಳ್ಳುತ್ತಿದ್ದೇವೆ ಎಂಬುದು ಎಷ್ಟು ಜನರ ಅರಿವಿಗೆ ಬಂದಿದೆ? ಹವಾಮಾನ ವೈಪರೀತ್ಯದ ಅಪಾಯಗಳ ಭಯಂಕರತೆಯೇ ನಮ್ಮ ಮನಸ್ಸಿಗೆ ಹೋಗದೆ, ಆ ಕುರಿತ ಸಮ್ಮೇಳನಗಳು ಒಂದಾದರ ಮೇಲೆ ಒಂದರಂತೆ ವಿಫಲವಾಗುತ್ತಿರುವುದರ ಸೂಚನೆಯಾದರೂ ಏನು? ಜಗತ್ತು ತನ್ನ ಆತ್ಮಸಾಕ್ಷಿಯನ್ನೇ ಕಳೆದುಕೊಂಡಿದೆ! ಅಥವಾ ಅದರ ತಲೆ ಸಂಪೂರ್ಣ ಕೆಟ್ಟಿದೆ.

ಮತ್ತೆ ಲೋಹಿಯಾ–ಗಾಂಧಿ

ಇಂಥ ಜಗತ್ತು, ಇಂಥ ದೇಶ ಎಷ್ಟು ಕಾಲ ನೆಮ್ಮದಿಯಿಂದಿದ್ದೀತು? ಯುದ್ಧಗಳು ನಿಲ್ಲುವಂತೆ ಕಾಣುತ್ತಿಲ್ಲ. ಭಯೋತ್ಪಾದನೆಗೆ ಅಂತ್ಯವಿದ್ದಂತೆ ಕಾಣುತ್ತಿಲ್ಲ. ನಮ್ಮ ಕಾಡುಗಳಲ್ಲಿನ ಸಶಸ್ತ್ರ ಬಂಡಾಯಗಳು ಹೊಸ ಎಲ್ಲೆಗಳಿಗೆ ವಿಸ್ತರಿಸುತ್ತಲೇ ಹೋಗುತ್ತಿವೆ. ಜಾಗತೀಕರಣದ ಹರಿಕಾರನಾದ ಅಮೆರಿಕಾದ ಅರ್ಥಶಾಸ್ತ್ರಜ್ಞರೇ ಆರ್ಥಿಕ ಹಿಂಜರಿತದಿಂದ ತತ್ತರಿಸಿ, ದಿಕ್ಕುಗಾಣದೆ ಇಂದು ಸಮಾಜವಾದಿ ನೀತಿಯತ್ತ ಕಣ್ಣು ಹಾಯಿಸತೊಡಗಿದ್ದಾರೆ. ನಮ್ಮ ಆಡಳಿತಗಾರರೂ ಮುಕ್ತ ಮಾರುಕಟ್ಟೆಯ ಆರ್ಥಿಕತೆಯನ್ನಿಟ್ಟುಕೊಂಡೇ, ಚುನಾವಣಾ ಯಶಸ್ಸಿಗಾಗಿ ಆವೃತ ಅಭಿವೃದ್ಧಿಯ ಮಾತನ್ನಾಡುತ್ತಿದ್ದಾರೆ. ಆದರೆ ಇದು ಸಂಪೂರ್ಣ ಭ್ರಷ್ಟಗೊಂಡ ನಾಗರಿಕತೆಯೊಂದರ ಅಂತಿಮ ಬಿಕ್ಕಟ್ಟಾಗಿದ್ದು, ಈಗ ಇಂತಹ ವೈಚಾರಿಕ ದ್ವಂದ್ವಗಳಿಗೆ, ಚೌಕಾಶಿಗಳಿಗೆ, ಗೊಂದಲಗಳಿಗೆ ಅವಕಾಶವೇ ಇಲ್ಲ ಎಂಬ ಅರಿವೇ ಯಾರಿಗೂ ಇದ್ದಂತಿಲ್ಲ...

ಲೋಹಿಯಾ ಮತ್ತು ಗಾಂಧಿ ಕನಿಷ್ಠ ಆಶಯಗಳಾಗಿ ನಮಗೆ ಮತ್ತೆ ನೆನಪಿಗೆ ಬರಬೇಕಾದದ್ದು ಬಹುಶಃ ಇಲ್ಲಿಯೇ, ಈಗಲೇ...

ಹೆಚ್ಚಿನ ಓದಿಗಾಗಿ:

'ಲೋಹಿಯಾ ಸಮಾಜವಾದ ದರ್ಶನ' ಲೇ:
ಡಿ.ಎಸ್.ನಾಗಭೂಷಣ ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ

'ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ' ಸಂ:
ಡಿ.ಎಸ್.ನಾಗಭೂಷಣ

ಪ್ರ: **ಸಂಕ್ರಮಣ ಪ್ರಕಾಶನ/ ಲೋಹಿಯಾ ಪ್ರಕಾಶನ**

'ಲೋಹಿಯಾ' ಲೇ: **ಓಂಕಾರ್ ಶರದ್**

ಕನ್ನಡಕ್ಕೆ: **ಹಸನ್ ನಯೀಂ ಸುರಕೋಡ**

ಪ್ರ: **ಲೋಹಿಯಾ ಪ್ರಕಾಶನ**

ಲೋಹಿಯಾ ಸಮಗ್ರ ಸಾಹಿತ್ಯ ಸಂಪುಟಗಳು

ಪ್ರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ, ಶಿವಮೊಗ್ಗ 57720[illegible]
ಮೊಬೈಲ್– 94498 86390, 99161 97291

ನಮ್ಮ ಕೆಲವು ಪ್ರಕಟಣೆಗಳು

- ಗಂಡುಗಲಿ ಮದಕರಿನಾಯಕ (ಕಾದಂಬರಿ)/ ಬಿ.ಎಲ್ ವೇಣು/ 195/–
- ವಿಷದಿಂದ ಪುಟಿಯಿತು ಅಮೃತ (ಕಾದಂಬರಿ) / 80/–
  ದಮಯಂತಿ ಶ್ರೀಕಾಂತ
- ಗಿಡಗಳ ಮೇಲೆ ಧೂಳು (ಕಾದಂಬರಿ) / 150/–
  ಗೋವಿಂದ ಮಿಶ್ರ; ಅನುವಾದ : ಆರ್.ಪಿ.ಹೆಗಡೆ
- ಒಡೆದ ಕನ್ನಡಿ (ಕಾದಂಬರಿ) / ಡಾ. ಕೇಶವ ಶರ್ಮ ಕೆ/ 195/–
- ಮುಖವಾಡದವರು (ಕಾದಂಬರಿ) / ಡಾ.ನಾ. ಡಿಸೋಜ/ 80/–
- ಶತಕತ್ರಯರು (ಸಂಸ್ಕೃತಿ ಚಿಂತನ ಬರಹಗಳು) / ಜೆ.ವಿ. ಜಯರಾಜಶೇಖರ/ 85/
- ಲಿಂಗಲೀಲಾ ಚಾರಿತ್ರ ಸಂಗ್ರಹ (ಸಂಸ್ಕೃತಿ ಚಿಂತನ ಬರಹಗಳು) / 85/–
  ಜೆ.ವಿ. ಜಯರಾಜಶೇಖರ
- ಕಾಲುದಾರಿ (ಕಥಾ ಸಂಕಲನ) / ದವನ ಸೊರಬ/ 80/–
- ಪಂಚತಂತ್ರ (ಮಕ್ಕಳಿಗಾಗಿ ಕಥಾ ಸಂಕಲನ) / ಡಾ.ನಾ. ಡಿಸೋಜ/ 30/–
- ಹಿತೋಪದೇಶ (ಮಕ್ಕಳಿಗಾಗಿ ಕಥಾ ಸಂಕಲನ) / 30/–
  ಡಾ.ನಾ. ಡಿಸೋಜ
- ಗುರುದೇವರ ಕಥೆಗಳು (ಮಕ್ಕಳಿಗಾಗಿ ಕಥಾ ಸಂಕಲನ) / 30/–
  ಡಾ.ನಾ. ಡಿಸೋಜ
- ಹಾ। ಸವಿಗನ್ನಡ (ಚಿಂತನ ಬರಹಗಳು) / 30/–
  ಡಾ.ನಾ. ಡಿಸೋಜ
- ವಿವೇಕ ವಿವೇಚನೆ (ಚಿಂತನ ಬರಹಗಳು) / 45/–
  ಡಾ.ನಾ. ಡಿಸೋಜ
- ನುಡಿಗನ್ನಡ (ಚಿಂತನ ಬರಹಗಳು) / 75/–
  ಸಿ.ಟಿ. ಶೈಲಾ ಜಯಕುಮಾರ
- ನಿಮ್ಮ ಕನಸಿನ ರಹಸ್ಯ (ವೈಜ್ಞಾನಿಕ ದೃಷ್ಟಿಕೋನದ ಬರಹಗಳು) / 75/–
  ತಡಸೂರು ಉಮೇಶ್

- ನಾವು ಸಂತೋಷವಾಗಿರುವುದು ಹೇಗೆ? (ವ್ಯಕ್ತಿತ್ವ ವಿಕಾಸನ ಲೇಖನಗಳು) / 120/–
  ಎಸ್.ಜಿ. ವೀರನ ಗೌಡ
- ಎಷ್ಟು ಬಣ್ಣದ ಇರುಳು (ಕವನ ಸಂಕಲನ) / ಮುದ್ದು ತೀರ್ಥಹಳ್ಳಿ/ 60/–
- ಚಂದ್ರನ ತುಂಡು (ಲಘು ಬರಹಗಳು) / ಮುದ್ದು ತೀರ್ಥಹಳ್ಳಿ/ 90/–
- ಮಿಲಿನಿಯಮ್ ಕನ್ನಡ ಸಾಮಾನ್ಯ ಅಧ್ಯಯನ ಕೋಶ/ (ಸ್ಪರ್ಧಾತ್ಮಕ ಪರೀಕ್ಷೆಗಳಿಗೆ)/ 200
- ಗ್ರಹಿಕೆ (ಮಹಿಳಾ ದೃಷ್ಟಿ ಕೋನದ ಲೇಖನಗಳು) / ಡಾ.ಈ. ಯರ್ರಿಸ್ವಾಮಿ/ 60/–
- ಲಿಂಗ ವ್ಯವಸ್ಥೆ ಸಂಕಥನ / 100/–
  ಪ್ರೇಮ ಅಪಚಂದ (ಮಹಿಳಾ ದೃಷ್ಟಿಕೋನದ ಲೇಖನಗಳು)
- ಮಹಿಳೆ ಮತ್ತು ಜಾತಿಶ್ರೇಣಿಕರಣ: ಅಂಬೇಡ್ಕರ್ ದೃಷ್ಟಿಕೋನ/ 150/–
  ಡಾ.ಈ. ಯರ್ರಿಸ್ವಾಮಿ
- ಸೋಗಡು (ಸಂಸ್ಕೃತಿ ಚಿಂತನೆ) / ಡಾ.ಈ. ಯರ್ರಿಸ್ವಾಮಿ/ 100/–
- ಇತಿಹಾಸ (ದ್ವಿ.ಪಿ.ಯು.ಸಿ ಪಠ್ಯಪುಸ್ತಕ) / ಸೀತಾರಾಮಭಟ್/ ರಾಮಪ್ರಸಾದ್/ 130/–
- ಹಾಸ್ಯ ಲಹರಿ (ಹಾಸ್ಯ – ಲೇಖನಗಳು) / 30/–
- ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರಾತಿನಿಧೀಕರಣ/ ಡಾ. ಗಾದಪ್ಪ/ 200/
- ದೇವರಾಜ ಅರಸು (ವ್ಯಕ್ತಿ ಚಿತ್ರಣ) ಡಾ. ಹಣಮಂತ್ರಾಯ ದೊಡ್ಡಮನಿ / 190/–
- ಕುಮಾರ ರಾಮ (ವ್ಯಕ್ತಿ ಚಿತ್ರಣ) /ಷಣ್ಮುಖಪ್ಪ/ 80/–
- ಹಿರಿಯರ ಹಾದಿ/ ಪ್ರೊ. ಎಂ.ಎನ್. ಸುಂದರರಾಜ್/ 90/–
- ನೀಲನಕ್ಷೆ (ವಿಮರ್ಶೆ)/ಡಾ. ಕೇಶವ ಶರ್ಮ ಕೆ. / 280/–
- ಕಂಡದ್ದು–ಕಾಣದ್ದು (ವಿಮರ್ಶೆ)/ಡಿ.ಎಸ್. ನಾಗಭೂಷಣ/ 250/–
- ಕುವೆಂಪು ಸಾಹಿತ್ಯ ದರ್ಶನ/ ಡಿ.ಎಸ್. ನಾಗಭೂಷಣ/ 95/–
- ಕುವೆಂಪು ಪುನರಾನ್ವೇಷಣೆ/ ಡಿ.ಎಸ್. ನಾಗಭೂಷಣ 240/–
- ಲೋಹಿಯಾ ಕೈಪಿಡಿ/ 25 ರೂ
- ಲೋಹಿಯಾ ವಾಣಿ/ 25 ರೂ.
- ಜೆ.ಪಿ. ಕೈಪಿಡಿ/ 25 ರೂ.



...ಇಂತಹ ಜಗತ್ತು, ಇಂತಹ ದೇಶ ಎಷ್ಟು ಕಾಲ ನೆಮ್ಮದಿಯಿಂದಿದ್ದೀತು? ಯುದ್ಧಗಳು ನಿಲ್ಲುವಂತೆ ಕಾಣುತ್ತಿಲ್ಲ. ಭಯೋತ್ಪಾದನೆಗೆ ಅಂತ್ಯವಿದ್ದಂತೆ ಕಾಣುತ್ತಿಲ್ಲ. ನಮ್ಮ ಕಾಡುಗಳಲ್ಲಿನ ಸಶಸ್ತ್ರ ಬಂಡಾಯಗಳು ಹೊಸ ಎಲ್ಲೆಗಳಿಗೆ ವಿಸ್ತರಿಸುತ್ತಲೇ ಹೋಗುತ್ತಿವೆ. ಜಾಗತೀಕರಣದ ಹರಿಕಾರನಾದ ಅಮೆರಿಕಾದ ಅರ್ಥಶಾಸ್ತ್ರಜ್ಞರೇ ಆರ್ಥಿಕ ಹಿಂಜರಿತದಿಂದ ತತ್ತರಿಸಿ, ದಿಕ್ಕುಗಾಣದೆ ಇಂದು ಸಮಾಜವಾದಿ ನೀತಿಯತ್ತ ಕಣ್ಣು ಹಾಯಿಸತೊಡಗಿದ್ದಾರೆ. ನಮ್ಮ ಆಡಳಿತಗಾರರೂ, ಮುಕ್ತ ಆರ್ಥಿಕ ನೀತಿಯನ್ನಪ್ಪಿಕೊಂಡೂ, 'ಆವೃತ ಅಭಿವೃದ್ಧಿ'ಯ ಮಾತನ್ನಾಡುವ ಒತ್ತಾಯಕ್ಕೆ ಒಳಗಾಗಿದ್ದಾರೆ...

–ಈ ಎಲ್ಲವೂ ಸಂಪೂರ್ಣ ಭ್ರಷ್ಟಗೊಂಡ ನಾಗರೀಕತೆಯೊಂದರ ಅಂತಿಮ ಬಿಕ್ಕಟ್ಟಿನ ಲಕ್ಷಣಗಳಾಗಿದ್ದು, ಈ ನಾಗರೀಕತೆಯನ್ನು ಅದರ ಎರಡು ನಿರ್ಣಾಯಕ ಕಾಲಘಟ್ಟಗಳಲ್ಲಿ ಮುಖಾಮುಖಿಯಾಗಿಸಿಕೊಂಡು ವಿಮರ್ಶಿಸಿದ ಗಾಂಧಿ ಮತ್ತು ಅವರ ಬಂಡಾಯ ಶಿಷ್ಯ ಲೋಹಿಯಾರನ್ನು ಮತ್ತೆ ನೆನಪಿಸಿಕೊಳ್ಳುವ ಕಾಲ ಈಗ ನಮಗೆ ಒದಗಿ ಬಂದಿದೆ ಎನಿಸುತ್ತದೆ.

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ,
ಶಿವಮೊಗ್ಗ–೫೭೭ ೨೦೧
+91 944988 6390

ISBN 978-93-81876-05-3
9 789381 876053
₹ ೨೫